On this motion there will be a general debate on the proposal to introduce the Bill and its consequence with respect to the State of Mysore. After this motion is adopted, another motion will be moved by the Leader of the House as follows:—

"That the Andhra State Bill, 1953, be taken into consideration."

At this stage, there will be no debate but the clauses of the Bill will be taken up clause by clause. Any member may move any amendments to any of the clauses of the Bill which relate to the State of Mysore. After all the clauses have been disposed of, the Leader of the House will make a third motion as follows:—

"That this House accords its approval to the provisions of the Andhra State Bill, 1953."

Of course, if this House makes any modifications in the Bill as placed before it, the motion will have to be modified accordingly by the addition of the words "as modified" at the end of the motion.

In order that the admissibility of amendments may be examined by my office and amendments printed and distributed to the Members, I would request that Hon'ble Members who have any amendments to be moved may kindly give notice well in time.

Sri MULKA GOVINDA REDDY (Chitaldrug).—I seek one clarification, Mr. Speaker. So far as amendments are concerned, I hope we are only asked to express our opinion. But if amendments are allowed, then we are given the right to discuss the provisions of the Bill clause by clause. To that extent how are we competent to usurp the power of the Parliament?

Mr. SPEAKER.—That will be examined after the amendments are received.

Notice of an Adjournment Motion.

Sri MULKA GOVINDA REDDY.—Yesterday afternoon, I have sent in an adjournment motion regarding the admission of students to Colleges.

Mr. SPEAKER.—I have not received it. We will see if you have presented any adjournment motion.

Sri MULKA GOVINDA REDDY.—Tomorrow, I will not be present in this House. So, that may be considered on Saturday.

Mr. SPEAKER.—That will be taken into consideration when the Member is present.

Minister's statement on a question.

Sri A. G. RAMACHANDRA RAO (Minister for Law and Education).—I request the permission of the Chair to make a short statement regarding the criticism that was levelled yesterday by Sri M. V. Rama Rao regarding an interpellation put in last session. He said that it was not answered and also spoke regarding the appeal which has been filed....

Sri A. BHEEMAPPA NAIK (Molakalmuru).—May I say that the Member concerned is not in the House?

Mr. SPEAKER.—When the Member is present, the Minister may make the statement.

DISCUSSION ON EDUCATIONAL REFORMS.

Sri A. G. RAMACHANDRA RAO (Minister for Law and Education).—Sir, I beg to move:

"That the report of the Committee for Educational Reforms in Mysore be taken into consideration."

(SRI A. G. RAMACHANDRA RAO.)

ಸ್ವಾಮಿ, ಈ ದಿವಸ ಶಿಕ್ಷಣಸುಧಾರಣಾ ಸಮಿತಿಯವರ ವರದಿಯನ್ನು ಈ ಸಭೆಯವರು ಪರಿಶೀಲನ ಮಾಡಬೇಕೆಂಬ ವಿಚಾರವಾಗಿ ನಾನು ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಪ್ರಾರಂಭದಲ್ಲಿ ಸಾಂಪ್ರದಾಯಕವಾಗಿ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ.

ಶಿಕ್ಷಣ ಸುಧಾರಣೆಯೆಂಬುದು ಒಂದು ಮಹತ್ವಪೂರಿತವಾದ ಪ್ರಶ್ನೆ. ದೇಶಕ್ಕೆ ಸ್ವಾತಂತ್ರ್ಯವೆಂಬುದು ಎಷ್ಟು ಪ್ರಾಮುಖ್ಯವಾದುದ್ದಾಗಿರುತ್ತದೆಯೋ ಇದೂ ದೇಶಕ್ಕೆ ಅಷ್ಟೇ ಪ್ರಾಮುಖ್ಯತೆಯುಳ್ಳದ್ದಾಗಿರುತ್ತದೆ. "ಪಾಂಚವಾರ್ಷಿಕ ಯೋಜನೆ" ಎಂಬ ಒಂದು ಯೋಜನೆಯು ಈಗ ದೇಶದ ಮುಂದೆ ಇದೆ. ನಮ್ಮ ದೇಶ ಪ್ರಪಂಚದಲ್ಲಿರತಕ್ಕ ಇತರ ರಾಷ್ಟ್ರಗಳ ಸಮಾಜದಲ್ಲಿ ಒಂದು ಸ್ಥಾನಮಾನವನ್ನು ಗಳಿಸಿಕೊಂಡು, ಬಹಳ ಶ್ರಮಪಟ್ಟು ಗಳಿಸಿರತಕ್ಕಂಥ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬರುವುದಕ್ಕೆ ಸಹಾಯಕವಾಗಿ ನಮ್ಮ ಮುಂದಿರುವ ಈ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಿ ಕಾರ್ಯಗತವಾಗಬೇಕಾಗಿದ್ದಲ್ಲಿ, ಈ ಶಿಕ್ಷಣ ಸುಧಾರಣೆಯೆಂಬುದು ಅದಕ್ಕೆ ಒಂದು ಅಡಿಪಾಯದಂತೆ ಇರುತ್ತದೆಂದು ಹೇಳಬಹುದಾಗಿದೆ. ಅಷ್ಟೇ ಅಲ್ಲದೆ ಈ ಶಿಕ್ಷಣ ಸುಧಾರಣೆಯೆಂಬುದು ಒಂದು ಮಹತ್ವಪೂರಿತವಾದ ಪ್ರಶ್ನೆ. ಇದು ಇಂದಿನ ಇಡೀ ಜನಾಂಗಕ್ಕೂ ಮತ್ತು ಮುಂದಿನ ತಲೆಮಾರುಗಳಿಗೂ ಅನ್ವಯಿಸುವಂಥ ಒಂದು ಪರಿಣಾಮಕಾರಿಯಾದ ಮತ್ತು ಮಹತ್ವಪೂರಿತವಾದ ಪ್ರಶ್ನೆಯಾಗಿರುತ್ತದೆಂದು ನಾವೆಲ್ಲರೂ ಭಾವಿಸಬೇಕಾಗಿದೆ.

ನಾವು ಎಜ್ಯುಕೇಷನ್ ಸಮಿತಿಯವರನ್ನು ನಿರ್ಧರಿಸಿಕೊಳ್ಳುವುದಕ್ಕೆ ಮೊದಲು, ಈ ಪ್ರಶ್ನೆಯ ಸಂಬಂಧವಾಗಿ ಸಾಮಾನ್ಯ ಚರ್ಚೆಯನ್ನು ಮಾಡಿ, ಇದನ್ನು ಒಂದು ಪರಿಣಾಮಕಾರಿಯಾದ ರೀತಿಯಲ್ಲಿ ಸಾರ್ವಜನಿಕರ ಮುಂದೆ ಇಡಬೇಕೆಂಬ ಉದ್ದೇಶದಿಂದ ಅನೇಕ ವರ್ಷಗಳಿಂದ ಶ್ರಮಪಡುತ್ತಿದ್ದೇವೆ. ಆದ್ದಾಗ್ಯೂ ಇದು ಬಹಳ ತೊಡಕಿನ ಒಂದು ಸಮಸ್ಯೆಯಾಗಿತ್ತೆ. ಇದನ್ನು ಅದಷ್ಟು ಜಾಗ್ರತೆ ನಮ್ಮ ದೇಶದ ಜನರಿಗೂ ಮತ್ತು ಸ್ಥಿತಿಗತಿಗಳಿಗೂ ಹೊಂದಿಕೊಂಡು ಹೋಗುವಂತೆ ಇದಕ್ಕೆ ಒಂದು ರೂಪು ಕೊಟ್ಟು ಅನಂತರ ಇದನ್ನು ಸಭೆಯ ಮುಂದಿಡಬೇಕೆಂಬ ಆಸೆಯಿಂದ ನಾವು ಈ ಕೆಲಸವನ್ನು ಕೈಗೊಳ್ಳರಾಯಿತು. ಈ ವಿಷಯದಲ್ಲಿ ಈ ರಿಪೋರ್ಟಿನ ಹೊರಗೆ ಹೊರಗೆಡಹುವಂಥ ನನ್ನ ಸ್ವಂತ ಅಭಿಪ್ರಾಯಗಳು ಯಾವುವೂ ಇರುವುದಿಲ್ಲ. ಆದುದರಿಂದ ನಾನು ತಮಗೆ ಹೇಳಬೇಕಾಗಿದ್ದಂಥ ಅನೇಕ ವಿಚಾರಗಳೆಲ್ಲಾ ಈ ವರದಿಯಲ್ಲೇ ಅಡಕವಾಗಿರುತ್ತವೆ. ಅದರೂ ವಾಸ್ತವವಾಗಿ ಯಾವ ಭಾವನೆಯಿಂದ ಇದರ ಸಂಬಂಧವಾಗಿ ಚರ್ಚೆ ನಡೆಸಬೇಕು, ಈ ಚರ್ಚೆಯಲ್ಲಿ ನಾವು ಎಷ್ಟು ದೂರ ಹೋಗಬಹುದು ಎಂಬುದರ ಬಗ್ಗೆ ಸ್ವಲ್ಪ ಸೂಕ್ಷ್ಮವಾಗಿ ನಾಲ್ಕು ಮಾತುಗಳನ್ನು ಹೇಳತಕ್ಕದ್ದು ಅಗತ್ಯವೆಂದು ಭಾವಿಸುತ್ತೇನೆ.

ಈ ಶಿಕ್ಷಣ ಸುಧಾರಣೆಯೆಂಬುದು ಯಾವ ಒಂದು ಪಕ್ಷ ಪಾರ್ಟಿಗಳಿಗೂ ಸೇರಿರುವಂಥ ಪ್ರಶ್ನೆಯಲ್ಲ. ಆದುದರಿಂದ ಇದನ್ನು ಒಂದು ರಾಷ್ಟ್ರೀಯ ಭಾವನೆಯಿಂದ ನೋಡಬೇಕಾಗಿದೆ. ನಮ್ಮ ದೃಷ್ಟಿಯನ್ನು ಎಷ್ಟು ದೂರ ಪ್ರಸರಿಸಬಹುದೋ ಅಷ್ಟು ದೂರ ಪ್ರಸರಿಸಬೇಕಾಗಿದೆ. ಇದೊಂದು ಬಹಳ ಪರಿಣಾಮಕಾರಿಯಾದ ಪ್ರಶ್ನೆಯೆಂದು ಭಾವಿಸಿ ಸಾರ್ವಜನಿಕರು ಇದನ್ನು ಒಂದು ವಿಶಾಲಭಾವನೆಯಿಂದಲೂ ಮತ್ತು ದೃಷ್ಟಿದೂರದಿಂದಲೂ ಪರಿಶೀಲನೆ ಮಾಡಬೇಕೆಂದು ನಾನು ಮೊಟ್ಟ ಮೊದಲನೆಯದಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಜನಜೀವನವನ್ನು ನಾವು ಯಾವ ಭಾಗದಲ್ಲಿ ಮಾರ್ಪಾಡು ಮಾಡಬೇಕಾಗಿದ್ದರೂ ಅದಕ್ಕೆ ಶಿಕ್ಷಣ ಸುಧಾರಣೆಯೇ ಮೂಲ. ಇಂಥ ಒಂದು ಸುಧಾರಣೆಯ ಬಗ್ಗೆ ಈಗ ಸಮಿತಿಯವರು ಒಪ್ಪಿಸಿರತಕ್ಕ ವರದಿಯಲ್ಲಿ ಅಡಕವಾಗಿರುವ ಪ್ರತಿಯೊಂದು ಅಕ್ಷರವೂ ಸಹ ಅಂಕುರಿಸುವಂಥ ಬೀಜದೋಪಾದಿಯಲ್ಲಿರುತ್ತದೆಯೆಂದು ಹೇಳಬಹುದು.

ನಾವು ಯಾವ ಶಾಸ್ತ್ರಗಳನ್ನೇ ಆಗಲಿ—ಒಂದು ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಅಥವಾ ಇನ್ನಾವ ಶಾಸ್ತ್ರವನ್ನೇ ಆಗಲಿ—ಪರಿಶೀಲನೆ ಮಾಡಬೇಕಾಗಿದ್ದರೆ ಅಥವಾ ಬದರಾವಣೆ ಮಾಡಬೇಕಾಗಿದ್ದರೆ ಅಥವಾ ಅವನ್ನು ಪರಿವರ್ತನೆ ಮಾಡಬೇಕಾಗಿದ್ದರೆ ಅದಕ್ಕಾಗಿ ನಾವು ಹೆಚ್ಚಿನ ಹಣವನ್ನೂ ಮತ್ತು ಕಾಲವನ್ನೂ ವಿನಿಯೋಗಿಸಬೇಕಾಗುತ್ತದೆ. ಆದುದರಿಂದ ನಾವು ಈಗ ನಮ್ಮ ಜನಾಂಗದ ಸುಧಾರಣೆಯನ್ನು ಕೈಗೊಳ್ಳಬೇಕಾಗಿರುವಾಗ ಈ ಸುಧಾರಣೆಯಲ್ಲಿ ನಾವು ಎಷ್ಟು ಶ್ರದ್ಧೆ ಮತ್ತು ಶ್ರಮವಹಿಸುತ್ತೇವೋ ನಮಗೆ ಅಷ್ಟು ಉತ್ತಮವಾದ ಪ್ರತಿಫಲ ದೊರೆಕುತ್ತದೆ. ಆದರೆ ಈ ಸುಧಾರಣೆಯೆಂಬ ಕೆಲಸವು ಒಂದು ಕಾಲದಲ್ಲಿ ಮಾಡಿ ಮುಗಿಸಿಕ್ಕೆಬಿಡುವಂಥದಲ್ಲ. ಇದು ಸದಾ ಕಾಲದಲ್ಲಿಯೂ ನಡೆಯುತ್ತಿರಬೇಕು. ನಾವು ಈ ದಿವಸ ಇಂಗ್ಲೆಂಡ್ ಮತ್ತು ಅಮೆರಿಕಾ ಎಂಬ ಯಾವ ರಾಷ್ಟ್ರಗಳನ್ನು, ಬಹಳ ಮುಂದುವರಿದ ರಾಷ್ಟ್ರಗಳೆಂದು ಹೇಳುತ್ತಿದ್ದೇವೆಯೋ ಅಂಥ ರಾಷ್ಟ್ರಗಳೂ ಕೂಡ ಈ ದಿನದವರೆಗೂ ಇಂಥ ಒಂದು ಸುಧಾರಣೆಯನ್ನು ಮಾಡಿಕೊಂಡೇ ಬಂದಿರುತ್ತವೆ. ಈ ವಿಷಯದಲ್ಲಿ "last word" ಎಂಬ ಶಬ್ದಗಳನ್ನು ಉಪಯೋಗಿಸುವಂಥ ಸಬ್‌ಜೆಕ್ಟೇ ಅಲ್ಲ ಇದು. ಈ ದಿವಸ ನಾನು ತಮ್ಮ ಮುಂದೆ ಮಂಡಿಸುತ್ತಿರುವ ವರದಿಯಲ್ಲಿ ಮಾಡಿರತಕ್ಕ ಶಿಫಾರ್ಸುಗಳೆಲ್ಲವೂ ಅವೇ ಅಂತ್ಯ ಶಿಫಾರ್ಸುಗಳು, ಖಚಿತವಾದಂಥ ಶಿಫಾರ್ಸುಗಳು, ನ್ಯಾಯವಾದವುಗಳು ಮತ್ತು ಶ್ರೇಷ್ಠವಾದವುಗಳು ಎಂದೇನೂ ಭಾವಿಸಬೇಕಾಗಿಲ್ಲ. ಈಗ ಈ ವರದಿಯನ್ನು ಮಹಾಜನರ ಅಭಿಪ್ರಾಯಗಳನ್ನು ಕ್ರೋಢೀಕರಿಸಬೇಕೆಂಬ ಉದ್ದೇಶದಿಂದ ಇಲ್ಲಿ ತರಲಾಗಿದೆ. ಇದರಲ್ಲಿ ಗೋಚರಕ್ಕೆ ಬಂದಿರುವ ಮತ್ತು ಬಾರದಿರುವಂಥ ದೋಷದೋಷಗಳು ಅನೇಕವಿರಬಹುದು. ಈಗ ಅದರಲ್ಲಿರಬಹುದಾದ ದೋಷದೋಷಗಳನ್ನು ಅದಷ್ಟು ಕಮ್ಮಿ ಮಾಡಿ, ಇದನ್ನು ನಮ್ಮ ಜನಜೀವನಕ್ಕೆ ಹೊಂದಿಕೊಂಡು ಹೋಗುವಂತೆ ಮಾರ್ಪಾಡು ಮಾಡಬೇಕಾಗಿದೆ. ಈ ದೃಷ್ಟಿಯಿಂದಲೇ ಇದನ್ನು ದೇಶದ ಮುಂದೆ ಹೊತಗೆಡವಿದ್ದೇವೆ. ಈಗಾಗಲೇ ಈ ಬಗ್ಗೆ ಅನೇಕ ಪತ್ರಿಕಾಕರ್ತರೂ, ಸಾರ್ವಜನಿಕ ಮುಖಂಡರೂ ಮತ್ತು ಪ್ರಾಜ್ಞರುಗಳಾದಂಥ ಜನರೂ ಅವರವರ ಅಭಿಪ್ರಾಯಗಳನ್ನು ಪತ್ರಿಕೆಗಳ ಮೂಲಕವೂ ಮತ್ತು ಇತರ ವಿಧಾನದಿಂದಲೂ ಕೊಟ್ಟಿರತಕ್ಕ ಅಂಶ ತಮಗೆಲ್ಲರಿಗೂ ತಿಳಿದೇ ಇದೆ.

1-30 P.M.

ಅಷ್ಟೇ ಅಲ್ಲದೆ ಅನೇಕ ಸಭೆಗಳ ಮುಂದಿಟ್ಟು ಅವುಗಳ ಅಭಿಪ್ರಾಯಗಳನ್ನು ಕೂಡ ಕ್ರೋಢೀಕರಿ

ನುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮೇಲಾಗಿ ಲೆಜಿಸ್ಲೇಚರಿಗೆ ಸಂಬಂಧಪಟ್ಟಂತೆ ಲೆಜಿಸ್ಲೇಟಿವ್ ಕೌನ್ಸಿಲ್ಲಿನವರು ಕೂಡ ಚರ್ಚೆಮಾಡಿ ತಮ್ಮ ನಲಹೆಗಳನ್ನಿತ್ತಿದ್ದಾರೆ. ಇದೆಲ್ಲಾ ಆಗಿ ಈಗ ಇದು ಈ ಸಭೆಯ ಮುಂದೆ ಬಂದಿದೆ. ಇಷ್ಟೇ ಅಲ್ಲದೆ ಇಂಡಿಯಾ ಸರ್ಕಾರದವರೂ ಕೂಡ ಸೆಕೆಂಡರಿ ಎಜ್ಯುಕೇಷನ್ ಸುಧಾರಣಾ ಸಮಿತಿಯೆಂದು ಮಾಡಿ ಅದು ದೇಶಾದ್ಯಂತ ಪರ್ಯಟನ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಸರ್ಕಾರದವರು ಅಂತಿಮವಾಗಿ ನಿರ್ಧಾರ ಮಾಡುವುದಕ್ಕೆ ಮೊದಲು ಈಗ ಬಂದಿರತಕ್ಕ ಎಲ್ಲಾ ಅಭಿಪ್ರಾಯಗಳಿಗೂ ಮೇಲಾಗಿ ಲೆಜಿಸ್ಲೇಟಿವ್ ಅಸೆಂಬ್ಲಿ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ಲಿನ ತೀರ್ಮಾನಗಳಿಗೆ ಮನ್ನಣೆ ಕೊಟ್ಟು ಮುಂದುವರಿಯಬೇಕೆಂದಿದ್ದಾರೆ. ಈ ದೃಷ್ಟಿಯಿಂದ ಆದಷ್ಟು ತೀವ್ರತೆಯಿಂದ ಕಾರ್ಯಗತ ಮಾಡಬೇಕೆಂದಿದ್ದರೂ ಕೂಡ, ನಮ್ಮ ಆತುರದಿಂದ ಇದು ಕೆಟ್ಟು ಹೋಗಬಾರದು ಎಂದು ಯೋಚಿಸಿ ಒಂದು ಕಡೆ ಎಲ್ಲರೂ ಮನಗಂಡಿರುವ ಲೋಪಗಳನ್ನು ಮುಂದುವರಿಸಿಕೊಂಡು ಹೋಗಕೂಡದೆಂದು ಒಂದು ಕಡೆ ಆತುರ ಪಡ್ದರೂ, ಇನ್ನೊಂದು ಕಡೆ ಇದು ಚೆನ್ನಾಗಿ ರೂಪು ಗೊಳ್ಳುತ್ತದೆ ಎಂಬ ಸಮಾಧಾನದಿಂದ ನಿಧಾನಿಸಿದ್ದೇವೆ. ಆದ್ದರಿಂದ ನಾನು ಮೊದಲೇ ಹೇಳಿದಹಾಗೆ ಈ ವಿಚಾರದಲ್ಲಿ ಯಾರ ಪಕ್ಷ ಭಾವನೆಯೂ ಇಲ್ಲದೆ ಲೋಪಗಳನ್ನು ಸ್ಪಷ್ಟವಾಗಿ ತಾವುಗಳು ತಿಳಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ ಮತ್ತು ಅದಕ್ಕೆ ಪೂರ್ಣ ಗಮನ ವನ್ನು ಕೊಡುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆಂದು ನಾನು ಹೇಳಲಚ್ಛಿಸುತ್ತೇನೆ.

ಈ ವರದಿಯಲ್ಲಿ, ಸಾಮಾನ್ಯವಾದ ಒಂದು ಚಿಕ್ಕ ಮಗು ತೆಗೆದುಕೊಂಡು ವಿದ್ಯಾಭ್ಯಾಸ ಕ್ರಮವನ್ನು ಅದು ಯಾವ ಯಾವ ಹಂತದಲ್ಲಿ ಯಾ ರೀತಿ ನಡೆಸಬೇಕು, ಆ ಹಂತದಲ್ಲಿ ಹುಡುಗನ ಅಥವಾ ಹುಡುಗಿಯ ಮನೋಭಾವ ಯಾವ ರೀತಿಯಾಗಿರುತ್ತದೆ, ಆ ಮನೋಭಾವಕ್ಕೆ ತಕ್ಕಂತೆ ಪಾಠ ಹೇಳುವ ಉಪಾಧ್ಯಾಯರ ಮನೋಭಾವ ಯಾವ ರೀತಿಯಾಗಿರಬೇಕು ಮತ್ತು ಶಿಕ್ಷಣಕೊಡಬೇಕಾದರೆ ಆ ಶಿಕ್ಷಣದಲ್ಲಿ ತೋರಿರಬೇಕಾದ ಅಗತ್ಯ ಮತ್ತು ಅಶಯವಲ್ಲದೆ ಪಠ್ಯ ಪುಸ್ತಕಗಳು ಹೇಗಿರಬೇಕು ಮತ್ತು ಇತರ ಸುಧಾರಣೆಗಳು ಏನೇನಿರಬೇಕೆಂಬುದನ್ನು ಸಾಧ್ಯವಾದಮಟ್ಟಿಗೂ ಕ್ರೋಢೀಕರಿಸಿದ್ದಾರೆ. ಜೊತೆಗೆ ಡಾ|| ಸಿ. ಆರ್. ರೆಡ್ಡಿಯವರ ರಿಪೋರ್ಟು ಮತ್ತು ರಾಧಾಕೃಷ್ಣನ್ ರಿಪೋರ್ಟುಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ಉತ್ತಮ ವಿಷಯಗಳನ್ನು ಇದರಲ್ಲಿ ಅಳವಡಿಸಿದ್ದಾರೆ. ಅಲ್ಲದೆ, ಈ ವಿಷಯವನ್ನು ಈ ಸಮಿತಿಗೆ ವಹಿಸುವಾಗಲೇ, ನಮ್ಮ ದೇಶದ ಸ್ಥಿತಿಗತಿಗಳನ್ನೂ ನಮ್ಮ ಆರ್ಥಿಕ ಪರಿಸ್ಥಿತಿಯನ್ನೂ ಯೋಚನೆಮಾಡಿ ಒಂದು Practical Scheme ಕೊಡಬೇಕೆಂದು ಕೂಡ ಸರ್ಕಾರದ ಆರ್ಡರಿತ್ತು. ಅದನ್ನು ಮುಂದಿಟ್ಟುಕೊಂಡು ಆ ಚೌಕಟ್ಟಿನಲ್ಲಿ ಸಾಧ್ಯಾಸಾಧ್ಯತೆಯನ್ನು ಕಂಡು ಶಿಫಾರಸು ಮಾಡಿದ್ದಾರೆ.

ಮೊದಲನೆಯದಾಗಿ ನರ್ಸರಿ ಸ್ಕೂಲುಗಳು. ಮಗು ಹುಟ್ಟಿದ ಮೂರನೆಯ ವರ್ಷದಿಂದ ಆರನೆಯ ವರ್ಷದ ವರೆಗೆ ಒಂದು ಹಂತವೆಂದು ಭಾವಿಸಿ ನರ್ಸರಿ ಸ್ಕೂಲುಗಳಿಗೆ ಹೆಚ್ಚಿಗೆ ಪ್ರಾಮುಖ್ಯತೆಯನ್ನು ಇಲ್ಲಿ ಕೊಟ್ಟಿದ್ದಾರೆ. ಆದರೆ ನಮ್ಮ ದೇಶದಲ್ಲಿ ಈಗ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸ ಎಷ್ಟು ಹರಡಬೇಕೋ ಅಷ್ಟು ಹರಡಿಲ್ಲ ದಿರುವುದರಿಂದ ಮತ್ತು ಅದಕ್ಕೆ ಹೆಚ್ಚಾದ ಪ್ರಾಶಸ್ತ್ಯ ವನ್ನು ನಮ್ಮ ರಾಜ್ಯಾಂಗದ ಪ್ರಕಾರಕೊಡಬೇಕಾದ ಅವಶ್ಯಕತೆಯಿರುವುದರಿಂದ ಅದನ್ನು ಮನಗಂಡು ಮೊದಲನೆಯದಾದ ನರ್ಸರಿ ಸ್ಕೂಲಿನ ಶಿಕ್ಷಣವನ್ನು ಸರ್ಕಾರದವರು ಕೈಕೊಳ್ಳುವುದು ಕಷ್ಟವಾಗಿದೆ. ಆದ್ದರಿಂದ ಇದನ್ನು ಸಾರ್ವಜನಿಕರಿಗೂ ಮತ್ತು ಸ್ಥಳೀಯ ಸಂಸ್ಥೆಗಳಿಗೂ ಬಿಡುವುದು ಸೂಕ್ತವೆಂಬ ನಿರ್ಧಾರಕ್ಕೆ ಬಂದು ಅವರು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಾಗಿ ಗಮನಕೊಟ್ಟಿದ್ದಾರೆ.

ಆದರೆ ನರ್ಸರಿಸ್ಕೂರ್ ವಿಚಾರದಲ್ಲಿ ಅವರು ಇಷ್ಟನ್ನೇ ಹೇಳಿ ಬಿಟ್ಟಿಲ್ಲ. ಎಲ್ಲೆಲ್ಲಿ ಸಾರ್ವಜನಿಕರು ಮುಂದೆ ಬಂದು ನರ್ಸರಿ ಸ್ಕೂಲುಗಳನ್ನು ಪ್ರಾರಂಭಿಸುವುದಕ್ಕಾಗಿ ಸಹಾಯವನ್ನು ಕೇಳುತ್ತಾರೋ ಅಂಥ ಸಂದರ್ಭಗಳಲ್ಲೆಲ್ಲಾ ಈಗ ಯಾವರೀತಿ ಸಹಾಯ ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ಸಹಾಯ ಮಾಡಿ ಪ್ರೋತ್ಸಾಹ ಕೊಡುವ ಅವಶ್ಯಕತೆಯೆಂದು ಸರ್ಕಾರದವರಿಗೆ ಶಿಫಾರಸು ಮಾಡಿದ್ದಾರೆ.

ಎರಡನೆಯದಾಗಿ, ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ, ನಮ್ಮ ರಾಜ್ಯಾಂಗ ರಚನೆಯಲ್ಲಿ ಪ್ರತಿಯೊಬ್ಬ ಪ್ರಜೆಗೂ 14ನೆಯ ವರ್ಷ ವಯಸ್ಸಾಗುವವರೆಗೂ ಹೆಣ್ಣು ಮಕ್ಕಳಿಗಾಗಲಿ ಗಂಡು ಮಕ್ಕಳಿಗಾಗಲಿ ಕಡ್ಡಾಯವಾಗಿ ಮತ್ತು ಉಚಿತವಾಗಿ ಶಿಕ್ಷಣಕೊಬೇಕೆಂದು Directive Principles ನಲ್ಲಿದೆ. ಅದಕ್ಕೂ ಮಾನ್ಯತೆಕೊಡಬೇಕೆಂದು ಇಲ್ಲಿ ಪ್ರಯತ್ನ ಪಟ್ಟಿದ್ದಾರೆ. ಈಗ ಸಾಮಾನ್ಯವಾಗಿ ನಡೆಯುತ್ತಿರುವ ವಿದ್ಯಾಭ್ಯಾಸ ಶಿಕ್ಷಣವನ್ನು ನೋಡುವುದಾದರೆ, ಆರು ವರ್ಷದಿಂದ ಹದಿನಾಲ್ಕು ವರ್ಷದವರೆಗೆ ವಿದ್ಯಾರ್ಥಿಗಳ ಸಂಖ್ಯೆ ಎಷ್ಟಿದೆಯೋ ಅಷ್ಟರಲ್ಲಿ 40%ರಷ್ಟಕ್ಕೆ ಮಾತ್ರ ವಿದ್ಯಾಭ್ಯಾಸ ನಡೆಯುತ್ತಿದೆ. ಈಗಿರುವ ರೀತಿಯಲ್ಲೇ ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾದರೂ ನಾವು ನಮ್ಮ ಶಾಲೆಗಳನ್ನು ಇನ್ನೂ 2½ ಭಾಗದಷ್ಟು ಹೆಚ್ಚಿಸಬೇಕಾಗಿದೆ. ಇದಕ್ಕೆ ನಮ್ಮ ಹಣಕಾಸಿನ ಸ್ಥಿತಿ ಯಾವರೀತಿಯಿದೆಯೆಂಬುದನ್ನು ನಾವು ಗಮನಿಸಬೇಕು. ಆದ್ದರಿಂದ, ಒಂದನೆಯದಾಗಿ ಆರ್ಥಿಕ ದೃಷ್ಟಿಯನ್ನೂ ಇಟ್ಟುಕೊಂಡು, ವಿದ್ಯಾಭ್ಯಾಸವನ್ನು ಹೆಚ್ಚಾಗಿ ಹರಡಬೇಕು, ಆದರೆ Content of Education ಕೂಡ ಕಡಮೆಯಾಗಬಾರದು ಎಂದು ಯೋಚನೆಮಾಡಿ 8 ವರ್ಷ ಆ ಕಡ್ಡಾಯವಾಗಿ ಶಿಕ್ಷಣ ವಿರುವುದಕ್ಕೆ ಬದಲಾಗಿ 6 ವರ್ಷದ ಶಿಕ್ಷಣವೇ ಸಾಕು, ಅಲ್ಲಿಗೆ ಖಾಯಮ್ಮಾದ ಬರವಣಿಗೆ ಬರುವುದಕ್ಕೆ ಸಾಕಷ್ಟು ಪರಿಜ್ಞಾನ ತರುವುದಕ್ಕೆ ಸಾಧ್ಯವಿದೆ. 8 ವರ್ಷದ ಪಾಠದ ಕೆಲಸವನ್ನು 6 ವರ್ಷದ ಕಾಲದಲ್ಲೇ ಹೆಚ್ಚು ಶ್ರದ್ಧೆವಹಿಸಿದರೆ ಮಾಡಬಹುದು ಮತ್ತು ಹೀಗೆ ಎರಡು ವರ್ಷ ಕಡಮೆಮಾಡಿ ಉಳಿತಾಯವಾದ ಹಣವನ್ನು ಹೆಚ್ಚಿಗೆ ವಿದ್ಯಾಭ್ಯಾಸವನ್ನು ಹರಡುವುದಕ್ಕೆ ಉಪಯೋಗಿಸಬಹುದು ಎಂದು ಮುಖ್ಯವಾದ ಒಂದು ನಿರ್ಣಯ ಮಾಡಿದ್ದಾರೆ. ಇವರ ವಿಷಯದಲ್ಲಿ ತಮ್ಮ ಗಳ ಅಭಿಪ್ರಾಯ ಮುಖ್ಯವಾಗಿ ಬೇಕಾಗಿದೆ.

ಎರಡನೆಯದಾಗಿ ಇಲ್ಲಿ ಶಿಕ್ಷಣ ಕೊಡುವ ಉಪಾಧ್ಯಾಯರಿಗೆ ಒಂದು ವಿಶೇಷ ಯೋಗ್ಯತೆಬೇಕು, ಸಾಮಾನ್ಯವಾಗಿ ಉಪಾಧ್ಯಾಯರುಗಳಿಗೆ ಎಷ್ಟರಮಟ್ಟಿಗೆ ದಕ್ಷತೆ, ಪರಿಜ್ಞಾನ ವಿರುತ್ತದೋ ಅದಕ್ಕೆತಕ್ಕಂತೆ ಅವರ ಹುದುಗರು ಇರುತ್ತಾರೆಂಬುದನ್ನು ತಿಳಿದು ಆ ಪ್ರೈಮರಿ ಸ್ಕೂಲು ಉಪಾಧ್ಯಾಯರಿಗೆ School final ಆದರೂ ಆಗಿರಬೇಕು, ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲವೆಂದು ನಿರ್ಣಯಮಾಡಿ, ಈ ಉಪಾಧ್ಯಾಯರುಗಳಿಗೆ ಎಸ್. ಎಸ್. ಎಲ್. ಸಿ., ಆಗಿ ಟ್ರೈನಿಂಗ್

(ಶ್ರೀ ಎ. ಜಿ. ರಾಮಚಂದ್ರರಾವ್.)

ಕೋರ್ಸ್ ಆಗಿರಬೇಕಾದದ್ದು ಅಗತ್ಯವೆಂದು ಸೂಚಿಸಿದ್ದಾರೆ; ಮತ್ತು ಒಳ್ಳೆಯ ಉಪಾಧ್ಯಾಯರುಗಳನ್ನು ಆಕರ್ಷಣೆ ಮಾಡುವುದಕ್ಕಾಗಿ ಅವರಿಗೆ ಕೊಡುತ್ತಿರುವ ವೇತನವನ್ನು ಬದಲಾವಣೆ ಮಾಡಬೇಕೆಂದು ಇನ್ನೊಂದು ಮುಖ್ಯವಾದ ಶಿಫಾರಸನ್ನು ಇದೆ.

ಆದೇರೆ, ಪ್ರಾಥಮಿಕ ವಿದ್ಯಾಭ್ಯಾಸದ ಉದ್ದೇಶವಾಗಿ, ರಾಷ್ಟ್ರೀಯ ಭಾವನೆ ಹುಡುಗರಲ್ಲಿ ಬರಬೇಕು. ಪ್ರತಿಯೊಬ್ಬ ಹುಡುಗನಿಗೂ ಕೂಡ ತಾನು ಹಿಂದೂ ಸ್ಥಾನದ ಪ್ರಜೆಯೆಂಬುದನ್ನು ಅರಿತುಕೊಳ್ಳುವ ಪರಿಜ್ಞಾನ ಉಂಟಾಗಬೇಕೆಂದು ಆಲೋಚನೆ ಮಾಡಿ ಐದು ಮತ್ತು ಆರನೆಯ ವರ್ಷಗಳಲ್ಲಿ ಹಿಂದಿ ಶಿಕ್ಷಣವನ್ನು ಪ್ರಾರಂಭ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಆದರೆ ಡಾ॥ ರಾಧಾಕೃಷ್ಣರವರು ಬಂದಾಗ ಎಲ್ಲಿಯವರೆಗೆ ಇಂಗ್ಲೀಷ್ ಮಾಧ್ಯಮ ಯೂನಿವರ್ಸಿಟಿಯಲ್ಲಿರುತ್ತದೆಯೋ ಅಲ್ಲಿಯವರೆಗೆ ಇಂಗ್ಲೀಷನ್ನು ಇಲ್ಲಿಯೇ ಹೇಳಿಕೊಡುವುದು ಸೂಕ್ತ ಎಂದು ಹೇಳಿದಮೇಲೆ ಅವರ ಸಲಹೆಗಳಿಗನುಗುಣವಾಗಿ 5-6ನೆಯ ವರ್ಷದಿಂದಲೇ ಇಂಗ್ಲಿಷನ್ನು ಪ್ರಾರಂಭಮಾಡುವುದು ಸೂಕ್ತವೆಂದು ಅಭಿಪ್ರಾಪಟ್ಟಿದ್ದಾರೆ. ಈ ವಿಷಯದಲ್ಲಿ ತಮ್ಮ ಅಭಿಪ್ರಾಯಬೇಕಾಗಿದೆ.

ಇನ್ನು ಸೆಕೆಂಡರಿ ವಿದ್ಯಾಭ್ಯಾಸದ ವಿಷಯದಲ್ಲಿ, ಈ ವಿದ್ಯಾಭ್ಯಾಸಕ್ಕೆ ಪ್ರವೇಶ ಮಾಡುವುದಕ್ಕೆ ಮೊದಲು ಇಮವರೆಗೂ ಮಿಡ್ಲ್‌ಸ್ಕೂಲ್ ಪರೀಕ್ಷೆಯೆಂದು ಏನಿತ್ತೋ ಆ ಮಿಡ್ಲ್ ಸ್ಕೂಲ್ ಪರೀಕ್ಷೆ ಪ್ರಯೋಜನವಿಲ್ಲ, ಚಿಕ್ಕ ವಯಸ್ಸಿನವರಾದ ಈ ಮಕ್ಕಳ ಮನಸ್ಸಿನಮೇಲೆ ಈ ಪರೀಕ್ಷೆಯಿಂದ ದುಷ್ಪರಿಣಾಮವಾಗುವುದಾಗಿ ಕಂಡು ಬರುತ್ತದೆ. ಮೇರಾಗಿ ಆ ಪರೀಕ್ಷೆಯಿಂದ ಹೆಚ್ಚಿನ ಪ್ರಯೋಜನವಿಲ್ಲವೆಂದು ಒಂದು ಹೆಚ್ಚಿನ ಗಣನೀಯವಾದ ಶಿಫಾರಸು ಮಾಡಿರುತ್ತಾರೆ.

ಇನ್ನು ಸೆಕೆಂಡರಿ ವಿದ್ಯಾಭ್ಯಾಸವೆನ್ನುವುದು ಈಗಿನ ಹೈಸ್ಕೂಲಿನ ಹಂತಕ್ಕೆ ಅನ್ವಯಿಸತಕ್ಕದ್ದು. ಹೈಸ್ಕೂಲು ಮೂರು ವರ್ಷವಿರುವುದನ್ನು ನಾಲ್ಕು ವರ್ಷ ಮಾಡಬೇಕೆಂದು ಸೂಚಿಸಿದ್ದಾರೆ: ಈ ನಾಲ್ಕು ವರ್ಷಗಳಲ್ಲಿ ವಿದ್ಯಾಭ್ಯಾಸ ಯಾವ ದೃಷ್ಟಿಯಿಂದ ನಡೆಯಬೇಕು, ಪಾಠಪ್ರವಚನಗಳು ಯಾವ ಗುರಿಯನ್ನು ಸಾಧಿಸಬೇಕು ಎಂಬುದನ್ನು ನೋಡಿ ಮುಖ್ಯವಾಗಿ ಮೂರು ದೃಷ್ಟಿಯಿಂದ ನಡೆಯಬೇಕು ಎಂದು ಹೇಳಿದ್ದಾರೆ. ಯಾವುವೆಂದರೆ, ಸಾಮಾನ್ಯವಾಗಿ ಒಳ್ಳೆಯ ಗೌರವಸ್ಥನಾದ ಪೌರನಾಗಬೇಕಾದರೆ ಅತನ ನೈತಿಕ ಮತ್ತು ವೈಡ್ಯಾನಿಕ ಗುಣ ಬೆಳೆಯಲಕ್ಕೆ ಅವಕಾಶ ಮಾಡಬೇಕೆಂದು ಹೇಳಿದ್ದಾರೆ. ಎರಡನೆಯದಾಗಿ, ಈಗ ನಾವು ನೋಡುವುದರಲ್ಲಿ ಸೆಕೆಂಡರಿ ವಿದ್ಯಾಭ್ಯಾಸದ ಕೊನೆಯಲ್ಲಿ ಶೇಕಡ 50 ಭಾಗದಷ್ಟು ಜನರು ವಿದ್ಯಾಭ್ಯಾಸವನ್ನು ಕೈಬಿಟ್ಟು ಬಿಡುತ್ತಾರೆ. ಇದಕ್ಕಾಗಿ ಈ ಹಂತದಲ್ಲಿ ಕೊಡತಕ್ಕ ವಿದ್ಯಾಭ್ಯಾಸ ಹುಡುಗರು ಈಗ ವಿದ್ಯಾಭ್ಯಾಸವಾದ ಮೇಲೆ ಬೇರೆ ಜೀವನೋಪಾಯವನ್ನು ಹೊಂದುವುದಕ್ಕೆ ಸಹಾಯಕವಾದ ವಿದ್ಯಾಭ್ಯಾಸವಾಗಿರಬೇಕು. ಹಾಗಿಲ್ಲದೆ ಅವರುಗಳಿಗೆ ಈಗಿರತಕ್ಕ ವಿದ್ಯಾಭ್ಯಾಸ ಶಿಕ್ಷಣವನ್ನೇ ಮುಂದುವರಿಸಿದರೆ ಅವರು ಮುಂದೆ ಯಾವ ಕಸುಬಿಗಾಗಲಿ, ಕೈಗಾರಿಕೆಗಾಗಲಿ ತಯಾರಾಗದೆ ಅಪ್ರಯೋಜಕವಾದ ಪ್ರಜೆಗಳಾಗಿ ಮಾತ್ರ ಉಳಿಯುತ್ತಾರೆ. ಹೀಗಾಗಬಾರದು ಎಂದು ಹೇಳಿ ಕಡ್ಡಾಯವಾದ ವ್ಯತ್ತಿಶಿಕ್ಷಣ ಈ ಸೆಕೆಂಡರಿ ವಿದ್ಯಾಭ್ಯಾಸದ ಘಟ್ಟದಲ್ಲಿ ನಡೆಯಬೇಕೆಂದು ಅವರು ಹೇಳಿದ್ದಾರೆ; ಅಲ್ಲದೆ ಆ ವೃತ್ತಿಯನ್ನು ಅಭಿವೃದ್ಧಿಮಾಡಿಕೊಂಡು ಆ ಕೈಗಾರಿಕೆಯನ್ನು ಕೂಡ ವಿದ್ಯಾರ್ಥಿಗಳು ಕಲಯುವಂತೆ ಕೈಗಾರಿಕೆ ಸ್ಕೂಲಿಗೆ ಹೋಗುವುದಕ್ಕೆ ಮಾರ್ಗವನ್ನು ಕಲ್ಪಿಸಬೇಕೆಂದು ಹೇಳಿದ್ದಾರೆ. ಈ ಪ್ರಕಾರ ಆತ ಸ್ವಾವಲಂಬಿಯಾಗಿ ಬಾಳುವುದಕ್ಕೆ ಅನುಕೂಲವಾಗುವಂತೆ ಟೆಕ್ನಿಕಲ್ ಶಿಕ್ಷಣಕ್ಕೆ ಹೋಗುವುದಕ್ಕೆ ಅವಕಾಶವಾಗುವುದಕ್ಕೆ ಸಹಾಯಕವಾದ ವಿದ್ಯಾಭ್ಯಾಸವನ್ನು ಈ ಸ್ಟೇಜಿನಲ್ಲಿ ಏರ್ಪಡಿಸಿದೆ.

ಇದೆಲ್ಲದರ ಜೊತೆಗೆ ವಿಶ್ವವಿದ್ಯಾನಿಲಯಕ್ಕೆ ಹೋಗುವುದಕ್ಕೆ ಅವಕಾಶ ಮಾಡುವುದು ಇದರ ಒಂದು ಮುಖ್ಯ ಗುರಿ. ಈ ಪ್ರಕಾರ ಮೂರು ನಾಲ್ಕು ದೃಷ್ಟಿಗಳಿಂದ ಇಲ್ಲಿನ ಪಾಠಪ್ರವಚನಗಳನ್ನು ಅಳವಡಿಸಬೇಕೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ವಿದ್ಯಾಭ್ಯಾಸ ಕ್ರಮದಲ್ಲಿಯೂ ಒಂದು ಮಾತು ಹೇಳಿದ್ದಾರೆ. ಇದುವರೆಗೆ ಪುಸ್ತಕಗಳ ಮೂಲಕವೇ ಪಾಠಪ್ರವಚನಗಳನ್ನು ನಡೆಸುತ್ತಿದ್ದರು. ಮಹಾತ್ಮ ಗಾಂಧೀಜೀಯವರು ಬೇಸಿಕ್ ಶಿಕ್ಷಣವೆಂದು ಹೇಳಿ ಒಂದು ಕೈಗಾರಿಕೆಯ ವೃತ್ತಿಯ ಮೂಲಕವಾಗಿಯೇ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತಿದ್ದರು. ವೃತ್ತಿಯನ್ನೇ ಕೇಂದ್ರವಾಗಿಮಾಡಿಕೊಂಡು ಆ ವೃತ್ತಿಯಿಂದ ಬಂದ ಲಾಭದಿಂದಲೇ ಅಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದು ಹೇಳುತ್ತಿದ್ದರು. ಇವರ ವಿಷಯದಲ್ಲಿ ಬಹಳ ಭಿನ್ನಾಭಿಪ್ರಾಯವಿದೆ. ಅಷ್ಟು ಚಿಕ್ಕ ವಯಸ್ಸಿನಲ್ಲೇ ಮಕ್ಕಳು ಕಸುಬಿನಲ್ಲಿ ತೊಡಗಿ ನಿಪಾದನೆ ಮಾಡಿ ಆ ನಿಪಾದನೆಯಿಂದಲೇ ಶಿಕ್ಷಣವನ್ನು ನಡೆಸುವುದು ಸಾಧ್ಯವಿಲ್ಲವೆಂದು ಒಂದು ಮತ, ಸಾಧ್ಯವೆಂದು ಇನ್ನು ಕೆಲವರ ಮತ. ಇದನ್ನು ರಿತು, ಇಲ್ಲಿ ಇವೆರಡು ಅಭಿಪ್ರಾಯಗಳಿಗೂ ಪಾಧ್ಯವರ್ತಿಯಾದ ಅಭಿಪ್ರಾಯವನ್ನು ಹಿಡಿದು ಇಲ್ಲಿನ ಶಿಕ್ಷಣ ಬೇಸಿಕ್ ಮಾದರಿಯಲ್ಲಿಯೇ ಆಯಾ ಸ್ಕೂಲಿನ ವಾತಾವರಣದಲ್ಲಿ ಯಾವ ಯಾವ ಕಸುಬುಗಳು, activities ಗಳಿವೆಯೋ ಅವುಗಳ ಮೂಲಕವೇ ಸಾಧ್ಯವಾದಷ್ಟು ಮಟ್ಟಿಗೆ ಶಿಕ್ಷಣ ಕೊಡಬೇಕೆಂದು ಹೇಳಿ ಒಂದು ಮಧ್ಯಮ ಮಾರ್ಗವನ್ನು ಹಿಡಿದಿದ್ದಾರೆ. ಆದ್ದರಿಂದ ಬೇಸಿಕ್ ಶಿಕ್ಷಣಕ್ಕೆ ತಳಹದಿ ಇಲ್ಲಿ ಪ್ರಾರಂಭವಾಗುತ್ತದೆ. ಮುಂದೆ ಉತ್ತರೋತ್ತರದಲ್ಲಿ ಬೇಸಿಕ್ ವಿದ್ಯಾಭ್ಯಾಸ ಪೂರ್ಣರೂಪವನ್ನು ತಾಳುವುದಕ್ಕೆ ಅವಕಾಶ ಮಾಡಬೇಕೆಂದು ಉದ್ದೇಶಪಟ್ಟಿದ್ದಾರೆ.

ಇನ್ನು ಕಾಲೇಜ್ ವಿದ್ಯಾಭ್ಯಾಸ. ಇದರಲ್ಲಿ ಈಗ ನಾಲ್ಕು ವರ್ಷದಲ್ಲಿ ಎರಡು ವರ್ಷ ಇಂಟರ್ ಮಾಡಿಯೆಟ್ ಕೋರ್ಸು, ಇನ್ನೆರಡು ವರ್ಷ ಡಿಗ್ರಿ ಕೋರ್ಸು: ಈ ಕಮಿಟಿಯವರು ಹಿಂದೆ ಯೂನಿವರ್ಸಿಟಿ ಶಿಕ್ಷಣವನ್ನು ಮಾರ್ಪಾಟು ಮಾಡಿದ 1921ನೆಯ ಇನಪಿಯ ಸ್ಯಾಡ್ಲರ್ ಕಮಿಟಿಯ ವರದಿಯನ್ನು ಮೊದಲುಗೊಂಡು ರೆಡ್ಡಿ ರಿಪೋರ್ಟವರೆಗೂ ಪರಿಶೀಲನೆ ಮಾಡಿ ಇಂಟರ್‌ಮೀಡಿಯೆಟ್ ಭಾಗ ಹೈಸ್ಕೂಲು ವಿದ್ಯಾಭ್ಯಾಸಕ್ಕೇ ಸೇರಿದ ಭಾಗ, ಯೂನಿವರ್ಸಿಟಿ ಶಿಕ್ಷಣ ಕ್ರಮವನ್ನು ಇಲ್ಲಿ ಅನುಸರಿಸುವುದಕ್ಕೆ ಸಾಧ್ಯವಿಲ್ಲ, ಅದನ್ನು ಸೆಕೆಂಡರಿ ವಿದ್ಯಾಭ್ಯಾಸದಲ್ಲೇ ಸಮಾವೇಶಗೊಳಿಸಬೇಕೆಂದು ಹೇಳಿ, ಅದನ್ನು Department of Educationಗೆ ವಹಿಸತಕ್ಕದ್ದು, ಅವರು ಮುಂದೆ ಯೂನಿವರ್ಸಿಟಿಯಲ್ಲ Higher Education ತೆಗೆದುಕೊಳ್ಳಲಕ್ಕೆ ಇಲ್ಲ ಹುಡುರನ್ನು ತರಬೇತು ಮಾಡಬೇಕೆಂದು ಹೇಳಿ, ಇಂಟರ್ ಮೀಡಿಯಟ್ಟನ್ನು ಹೈಯ್ಯರ್ ಸೆಕೆಂಡರಿ ಎಂದು ಹೇಳಿ

ವಿದ್ಯಾಇಲಾಖೆಗೆ ಕೊಡಬೇಕೆಂದು ಹೇಳಿದ್ದಾರೆ. ಇದರ ವಿಷಯದಲ್ಲಿ ನ್ಯಾಲ್ಪ ಮಟ್ಟಿನ ಭಿನ್ನಾಭಿಪ್ರಾಯವಿದೆ ಕಾರ್ಲೇಜ್ ಎಂದಿರುವುದೇ ಒಳ್ಳೆಯದೆಂದೂ ಅದು ವಿದ್ಯಾರ್ಥಿಗೆ ಉತ್ತಮ ಸ್ಥಾನವನ್ನು ಕೊಡುತ್ತದೆಂದೂ ಹಲವರು ಹೇಳಿದ್ದಾರೆ. ಇದನ್ನೂ ಮಾನ್ಯ ಸದಸ್ಯರು ಈಗ ಯೋಚನೆ ಮಾಡಬೇಕಾಗಿದೆ.

ಕೊನೆಯದಾಗಿ ಯೂನಿವರ್ಸಿಟಿ ಎಜ್ಯುಕೇಷನ್ ವಿಚಾರದಲ್ಲಿ, ಈ ರಿಪೋರ್ಟಿನಲ್ಲಿ ಹೆಚ್ಚಾಗಿ ಪರಿಶೀಲನೆ ಮಾಡಿಲ್ಲವೆನ್ನಬೇಕು. ಏಕೆಂದರೆ, ಇಂಡಿಯನ್ ಯೂನಿವರ್ಸಿಟಿ ಕಮಿಷನ್ನಿನವರು ಡಾ॥ ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಏನೇನು ಸುಧಾರ ಮಾಡಬೇಕೆಂಬುದನ್ನು ನಿರ್ಣಯಿಸುತ್ತಿದ್ದಾರೆ. ಆದ್ದರಿಂದ ಅದರ ವಿಷಯದಲ್ಲಿ ಇದರಲ್ಲಿ ಹೆಚ್ಚಿಗೆ ಬದಲಾವಣೆ ಸೂಚಿಸಿಲ್ಲ.

ಈ ರೀತಿಯಾಗಿ ನರ್ಸರಿ, ಪ್ರೈಮರಿ ಮತ್ತು ಸೆಕೆಂಡರಿ, ಕೊನೆಗೆ ಯೂನಿವರ್ಸಿಟಿ ಎಂದು ನಾಲ್ಕು ಹಂತಗಳೆಂದು ಸೂಚಿಸಿದ್ದಾರೆ. ಇದರಲ್ಲಿ ಪುನಃ ನಾಲ್ಕು ಭಾಗ ಮಾಡಬಹುದು. ಯಾವ ವಿದ್ಯಾರ್ಥಿಗಳು ಯಾವ ಹಂತಕ್ಕೆ ಓದುವುದಕ್ಕೆ ಬರುತ್ತಾರೋ ಅವರ ಮನೋಭಾವಕ್ಕೆ ಅನುಕೂಲವಾಗಿರತಕ್ಕದ್ದೂ ಮತ್ತು ಆಯಾ ಕಾಲಕ್ಕೆ ಅವರ ದರ್ಜೆಗೆ ಅನುಗುಣವಾಗಿರುವಂತೆಯೂ ಅದ ಯಾವ ಯಾವ ಪಠ್ಯ ಪುಸ್ತಕಗಳನ್ನಿಡಬೇಕು, ಅದಕ್ಕೆ ಬೇಕಾದ ಉಪಾಧ್ಯಾಯರುಗಳು ಹೇಗಿರಬೇಕು ಮತ್ತು ಯಾವ ತರಪೇತು ಹೊಂದಿರಬೇಕು; ಅವರಿಗೆ ಯಾವ ಯಾವ ಸಲಕರಣೆಗಳಿರಬೇಕು—ಇವೇ ಮುಂತಾದುವುಗಳನ್ನೂ ತಾವೀಗ ವಿಮರ್ಶೆಮಾಡಬೇಕಾಗಿದೆ.

ಮುಖ್ಯವಾಗಿ, ನಾನು ಒಂದು ಮಾತಿನಲ್ಲಿ ಹೇಳುವುದಾದರೆ, ನಮ್ಮ ಜನಾಂಗ ಮುಂದುವರಿಯಬೇಕಾಗಿದೆ. ಈ ಹೊತ್ತಿನ ಶಿಕ್ಷಣ ಕ್ರಮದಲ್ಲಿ ಯಾವ ಒಂದು ದೋಷ ಕಾಣುತ್ತಿದೆಯೆಂದರೆ, ನಮ್ಮ ಯುವಕರು ಪರೀಕ್ಷೆಗಳಲ್ಲಿ ಅಪಜಯ ಹೊಂದುತ್ತಿದ್ದಾರೆ, ಹಾಗೆಯೇ ಜೀವನದಲ್ಲೂ ಅಪಜಯ ಹೊಂದುತ್ತಿದ್ದಾರೆ, ನಿರೀಕ್ಷಿಸುವಷ್ಟು ಜಯಶೀಲರಾಗುತ್ತಿಲ್ಲ. ವಿದ್ಯಾಭ್ಯಾಸ ಮಾಡುವಾಗ ಪರೀಕ್ಷೆಗಳಲ್ಲಿ ಸರಿಯಾಗಿ ತೇರ್ಗಡೆ ಹೊಂದುವುದಿಲ್ಲ. ಒಂದು ವರ್ಷದಲ್ಲಿ ಆಗುವುದಕ್ಕೆ ಎರಡುವರ್ಷವಾಗುತ್ತದೆ. ಈ ಎರಡು ದೋಷಗಳೂ ತಪ್ಪಬೇಕು. ಈ ಶಿಕ್ಷಣಕ್ಕೆ ನಮ್ಮ ಹುಡುಗರನ್ನೂ ಹುಡುಗಿಯರನ್ನೂ ಒಳಪಡಿಸುವುದರಿಂದ ಅವರು ಉತ್ತಮ ಪ್ರಜೆಗಳಾಗಬೇಕು, ಸಮಾಜ ಉದ್ಧಾರವಾಗಬೇಕು, ಹೀಗೆ ಉದ್ಧಾರವಾದ ಸಮಾಜದಿಂದ ದೇಶ ಸರಿಯಾಗಿ ಸುಭದ್ರವಾಗಬೇಕು. ಸುಧಾರಣಾ ಸಮಿತಿಯ ವರದಿ ತಮ್ಮ ಮುಂದಿದೆ. ಅದನ್ನು ಈ ದೃಷ್ಟಿಯಿಂದ ಪರಿಶೀಲನೆ ಮಾಡಿ ತಮ್ಮ ಅಭಿಪ್ರಾಯವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Motion moved:

"That the report of the Committee for Educational Reforms in Mysore be taken into consideration."

*Sri J. MOHAMED IMAM (Jagalur).—Before we proceed with the discussions, I want some clarification from the Hon'ble Minister. Regarding merit and other things, I am not speaking now. I only seek some information from him. The report is before the Government for the last three months. I want to know if the Government have prepared any scheme for the implementation of the various reforms and recommendations contained therein. If a scheme has been prepared, in what stage is it? Have they drawn up a programme and estimate for implementing these? What are the propoasls of the Government to have necessary finances? What are their suggestions? If the Government can let us know as to how they are going to find out the necessary financial means for the implementation of these proposals, it will help us greatly. There is also a recommendation that the Centre must also come to our aid, and that the Government of India must be approached. I want to know if the Government of Mysore have been corresponding with the Government of India and if they have succeeded in getting financial aid from the Government of India. If my points are explained and information placed before the House, it will facilitate discussion. I am sure all the Members will hail the reform as an excellent one, but the most difficult portion of it is its implementation. I therefore seek to know what steps Government intend to adopt for implementation. If they explain, it will greatly facilitate further discussion.

*ಶ್ರೀ ಎ. ಪಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಕೇಂದ್ರ ಸರ್ಕಾರದ ವಿದ್ಯಾ ಇಲಾಖೆಯವರು ಪ್ರಾಥಮಿಕ ವಿದ್ಯಾಭ್ಯಾಸ ಒಂದನ್ನು ಬಿಟ್ಟು ಮಿಕ್ಕುದನ್ನು ಬದಲಾವಣೆ ಮಾಡುವುದನ್ನು ಸಾವಕಾಶಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆಂದು ಕೇಳಿದ್ದೇವೆ; ಅದರ ವಿಷಯವೇನೆಂಬುದನ್ನೂ ಹೇಳಬೇಕು.

ಶ್ರೀ. ಎ. ಜಿ. ರಾಮಚಂದ್ರರಾವ್.—ಬಹುಶಃ ನಾನು ಹೇಳಿದ ಎರಡು ಮಾತುಗಳಲ್ಲಿ ಇದಕ್ಕೆ ಉತ್ತರ ಕೊಟ್ಟಿದ್ದೇನೆಂದು ಕಾಣುತ್ತದೆ. ಆದರೂ ಹೇಳುತ್ತೇನೆ.

ನಾನು ಮೊದಲೇ ಹೇಳಿದಂತೆ, ಸೆಕೆಂಡರಿ ಎಜ್ಯುಕೇಷನ್ ಸುಧಾರಣಾ ಸಮಿತಿಯ ಶಿಫಾರಸುಗಳನ್ನು ನಾವು ಕಾದಿದ್ದೇವೆ. ಅವರು ಏನುಮಾಡಿದರೂ ಒಟ್ಟು ಭಾರತಕ್ಕೆ ಅನ್ವಯಿಸುವಂತೆ ಯೋಚನೆ ಮಾಡುತ್ತಾರೆ.

(ಶ್ರೀ ಎ. ಜಿ. ರಾಮಚಂದ್ರರಾವ್.)

ಅಲ್ಲಿಂದ ಯಾವುದಾದರೂ ಯೋಜನೆಬಂದರೆ ಅದಕ್ಕೆ ನಮ್ಮದು ಹೊಂದಿಕೊಂಡು ಹೋಗಬೇಕು, ನಾವೇ ಬೇರೆ ಎಂಬ ಭಾವನೆಯಿಂದ ಮಾಡಬಾರದು. ಒಂದು ಕಡೆ ಆದಷ್ಟು ಜಾಗ್ರತೆಮಾಡಬೇಕೆಂಬ ಮನೋಭಾವ ವಿದ್ದರೂ, ಮಾಡುವ ಕೆಲಸವನ್ನು ಹಾಳುಗೆಡಿಸಬಾರದು. ಆದುದರಿಂದ ಅವರ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ.

ಎರಡನೆಯದಾಗಿ, ಆರ್ಥಿಕ ಸ್ಥಿತಿಗೆ ಸಂಬಂಧ ಪಟ್ಟದ್ದು. ಈಗಿನ ಪರಿಸ್ಥಿತಿಗೆ ಇಂಥಾ ಒಂದು ಸುಧಾರಣೆ ಆವಶ್ಯಕವೆಂದು ನಾವು ನಿರ್ಧಾರ ಮಾಡಿದಮೇಲೆ ಇದಕ್ಕೆ ಅವಶ್ಯಕವಾದ ಹಣಕಾಸಿನ ಏರ್ಪಾಡನ್ನೂ ನಾವು ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಆರ್ಥಿಕ ಸ್ಥಿತಿ ಎಷ್ಟುಮಟ್ಟಿಗಿದೆಯೋ ಅಷ್ಟುಮಟ್ಟಿಗೆ ಬೆಳೆಸಿ ಕೊಂಡು ಹೋಗುವುದಕ್ಕೆ ಸಾಧ್ಯ. ನಮಗೆ ಒಂದು ಗುರಿ ಅಥವಾ ಒಂದು ಮಾದರಿ, ಒಂದು ಯೋಜನೆ ಯಿಲ್ಲದೆ ಏನು ಮಾಡುವುದಕ್ಕೂ ಆಗುವುದಿಲ್ಲ. ನಮ್ಮ ಆರ್ಥಿಕ ಪರಿಸ್ಥಿತಿ ಸರಿಯಾಗುವವರೆಗೆ ಕಾದಿರುತ್ತೇವೆಂದರೆ, ಮಾಡುವುದಕ್ಕಾಗುವುದೇ ಇಲ್ಲ. ಈಗಿನ ಯೋಜನೆಯಲ್ಲಿ, ಒಂದು ವಿಧದಲ್ಲಿ, ರೆಕ್ಟಿಫಿಕೇಷನ್ ಮಾಡಿ, ಇಷ್ಟು ಖರ್ಚಾಗುತ್ತದೆಂದು Financial Implications ನಮೂದಿಸಿದೆ. ಸಾಧ್ಯವಾದಮಟ್ಟಿಗೂ ಇಂಥ ಗುರಿಯನ್ನು ನಾವು ಮುಟ್ಟಬೇಕು, ಇದನ್ನು ಮುಟ್ಟಲು ಇಂಥ ಸಲಕರಣೆ ನಮ್ಮಲ್ಲಿದೆ, ಇಂಥಾದ್ದು ಇಲ್ಲ ಎಂಬುದನ್ನೆಲ್ಲಾ ಯೋಚನೆಮಾಡಿ ಕ್ಯೆಗೂಡಿದ ಮಟ್ಟಿಗೂ ಸಾಹಸದಿಂದ ಈ ಕಾರ್ಯವನ್ನು ಸಫಲಗೊಳಿಸಬೇಕು. ಸುಮ್ಮನೆ ಕಾದು ಕುಳಿತರೆ ಸಾಧ್ಯವಾಗುವುದಿಲ್ಲ. ನಮ್ಮ ಗುರಿಯನ್ನು ಮುಟ್ಟಲು ಇನ್ನೂ ಸುಲಭ ಮಾರ್ಗ ವಿದ್ದರೆ ಅದನ್ನು ಮಾನ್ಯಸದಸ್ಯರು ಸೂಚಿಸುವುದಕ್ಕೆ ಅವಕಾಶವಿದೆ, ಅದನ್ನು ಸ್ವಾಗತಿಸುತ್ತೇನೆ. ಇದರ ವಿಚಾರದಲ್ಲಿ ಸರ್ಕಾರದವರು ಇನ್ನೂ ಏನೂ ತೀರ್ಮಾನ ಮಾಡಿಲ್ಲ.

Sri J. MOHAMED IMAM.—What are the ways and means to implement these proposals?

ಅದೇನಾದರೂ 'ಪ್ರಪೋನರ್ಸ್' ಸರ್ಕಾರದಲ್ಲಿದೆಯೆ? Stage by stage ಮಾಡೋಣ, ಸೆಕೆಂಡರಿ ಎಜ್ಯುಕೇಷನ್ ಮುಂದೆಹಾಕೋಣ, ಎಂದು ಪ್ರೈಮರಿ ವಿದ್ಯಾಭ್ಯಾಸದ ಸುಧಾರಣೆಯನ್ನು ಕಾರ್ಯಗತ ಮಾಡಲು 'ಪ್ರಪೋನರ್ಸ್' ಏನಾದರೂ ಸರ್ಕಾರದಲ್ಲಿದೆಯೆ ಎಂಬುದನ್ನು ಅವರು ತಿಳಿಸಬೇಕು.

ಶ್ರೀ ಎ. ಜಿ. ರಾಮಚಂದ್ರರಾವ್.—ನರ್ಸರಿ ಸ್ಕೂರ್ಸ್ ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ವೆಂದು ತೀರ್ಮಾನವಾಯಿತು. ಪ್ರಾಥಮಿಕ ವಿದ್ಯಾಭ್ಯಾಸ, ಸೆಕೆಂಡರಿ ವಿದ್ಯಾಭ್ಯಾಸ ಸರ್ಕಾರ ನೋಡಿ ಕೊಳ್ಳಬೇಕು. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಈಗ ಮಾಡುತ್ತಿರುವುದಕ್ಕಿಂತಲೂ ಹೆಚ್ಚು ಖರ್ಚು ಮಾಡುವುದಕ್ಕೆ ಈಗ ಸಾಧ್ಯವಿಲ್ಲ. ನಮ್ಮ ಐದು ವರ್ಷದ ಯೋಜನೆ ಪೂರ್ತಿಯಾದಮೇಲೆ ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ, ಇದಕ್ಕೆ ಬೇಕಾದ ಹಣ ಒದಗುತ್ತದೆ ಎಂಬ ಭರವಸೆ ಇದೆ.

ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಸೆಕೆಂಡರಿ ವಿದ್ಯಾಭ್ಯಾಸ ಈ ಎರಡೂ ಮುಖ್ಯ- ಸೆಕೆಂಡರಿ ಶಿಕ್ಷಣ ಕೊಡುವುದರ ಜೊತೆಗೆ ಸ್ವತಂತ್ರವಾಗಿ ಜೀವನ ನಡೆಸಲು ಅನುಕೂಲವಾಗುವಂತಹ technical ಅಥವಾ occupational training ಕೂಡ ಕೊಡಬೇಕೆಂದು ಸಲಹೆ ಕೊಟ್ಟಿದ್ದಾರೆ. ಆದುದರಿಂದ, ಸ್ಥೂಲವಾಗಿ ಹೇಳುವುದಾದರೆ, ಈಗಿರತಕ್ಕ ಹಾಗೆ ವಿದ್ಯಾಭ್ಯಾಸ waste ಆಗದೇಯಿರುವ ರೀತಿ ಯಿರಬೇಕು ಎಂಬುದರ ಕಡೆ ಸಾರ್ವಜನಿಕರು ಗಮನಕೊಡಬೇಕು. ಈ ಬಗ್ಗೆ ಸರ್ಕಾರದ ನಿರ್ದಿಷ್ಟ ಸಲಹೆಗಳೇನೂ ಇಲ್ಲ, ಮಾನ್ಯ ಸದಸ್ಯರು ಸಲಹೆ ಕೊಡಬೇಕು.

ಕೇಂದ್ರ ಸರ್ಕಾರದಿಂದ ಬರತಕ್ಕ ಸಹಾಯದ ವಿಷಯದಲ್ಲಿ, ಅವರೊಡನೆ ಪತ್ರವ್ಯವಹಾರ ನಡೆಸುತ್ತಿದ್ದೇವೆ. ವ್ಯೆಯಕ್ತಿಕವಾಗಿ ಚರ್ಚೆಮಾಡಿದ್ದೇವೆ. ಇಷ್ಟೇ ಅಲ್ಲದೆ, ಅವರೊಡನೆ ಚರ್ಚೆಮಾಡಲು ಹೋಗಿದ್ದಾಗ, ಯುನೈಟೆಡ್ ಸ್ಟೇಟ್ಸ್‌ನಲ್ಲಿ ಫೆಡರಲ್ ಸರ್ಕಾರವಿದೆ. ಅಲ್ಲಿನ ಫೆಡರಲ್ ಸರ್ಕಾರ ಸ್ಟೇಟ್ಸ್ ಸರ್ಕಾರಗಳಿಗೆ ಏನು ಸಹಾಯ ಮಾಡುತ್ತಿದ್ದಾರೆಂಬುದನ್ನು ನೋಡಿ, ನಮಗೆ ಸಾಕಾಗುವಷ್ಟು ಸಹಾಯ ಒದಗಿಸುತ್ತೇವೆಂದು ಹೇಳಿದರು. ಸಾಮಾನ್ಯವಾಗಿ ಸ್ಟೇಟ್ ಸರ್ಕಾರದವರು ಶೇಕಡ 60 ರಷ್ಟು ಖರ್ಚುಮಾಡುತ್ತಾರೆ. ಕೇಂದ್ರ ಸರ್ಕಾರದವರು ಸುಮಾರು ಶೇಕಡ 3 ರಷ್ಟು ಕೊಡುತ್ತಾರೆ. ಸಾರ್ವಜನಿಕರೇ ಹೆಚ್ಚಾಗಿ ಮುಂದೆ ಬರುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಆದರೆ, ಇದು ನಮ್ಮ ದೇಶದ ಈ ಹೊತ್ತಿನ ಪರಿಸ್ಥಿತಿಗನುಗುಣವಾಗಿಲ್ಲ. ಆದರೆ ನಾವು ತಾಳಬೇಕು. ಬೇಸಿಕ್ ವಿದ್ಯಾಭ್ಯಾಸಕ್ಕೆ ಆಗುವ ಖರ್ಚಿನ ಬಹು ಭಾಗವನ್ನು ಕೊಡುವುದಕ್ಕೆ ಒಪ್ಪಿದ್ದಾರೆ. ಟೆಕ್ನಿಕಲ್ ಶಿಕ್ಷಣಕ್ಕೆ ಸಹಾಯ ಮಾಡುತ್ತೇವೆಂದು ಒಪ್ಪಿದ್ದಾರೆ. ಇಷ್ಟೇ ಕೊಡುತ್ತೇವೆಂದು ನಿಗದಿಯಾಗಿ ಹೇಳಿಲ್ಲದಿದ್ದರೂ ಇದನ್ನು ವಿಸ್ತರಿಸಿ ಎಂದು ಹೇಳಿದ್ದಾರೆ. ರಿನರ್ಷ್‌ಭಾಗಕ್ಕೆ ಸಹಾಯ ಮಾಡುತ್ತೆವೆಂದು ಹೇಳಿದ್ದಾರೆ. ಮೂರರಲ್ಲಿ ಎರಡು ಭಾಗವನ್ನು ನಾವು ಹಾಕಿದರೆ ಮೂರರಲ್ಲಿ ಒಂದು ಭಾಗವನ್ನು ಅವರು ಕೊಡುತ್ತಾರೆಂಬ ನಂಬಿಕೆ ಇದೆ. ಬೇಸಿಕ್ ಶಿಕ್ಷಣಕ್ಕೆ ಮೂರನೆಯ ಎರಡು ಭಾಗ ಅವರು ಮೂರನೆಯ ಒಂದು ಭಾಗ ನಾವು ವಹಿಸಬಹುದೆಂದು ತೋರುತ್ತದೆ. ಒಟ್ಟಿನಲ್ಲಿ ಎಲ್ಲವೂ ಅನಿರ್ದಿಷ್ಟ ಸ್ಥಿತಿಯಲ್ಲಿದೆ. ಕಾರ್ಯವನ್ನು ಪ್ರಾರಂಭಮಾಡಿ ಮುಂದು ವರಿಸುವುದು ಸೂಕ್ತ. ನಿರಾಶಾಭಾವನೆ ಹೊಂದುವುದು ಸೂಕ್ತವಲ್ಲವೆಂದು ಸೂಚಿಸುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಮಾನ್ಯ ಅಧ್ಯಕ್ಷರೆ, ವಿದ್ಯಾಭ್ಯಾಸ ಸುಧಾರಣೆಯ ವಿಷಯದಲ್ಲಿ ಶ್ರೀ ಇಮಾಂ ಸಾಹೇಬರು ಕೆಲವು ಪ್ರಶ್ನೆಗಳನ್ನು ಹಾಕಿದರು. ಅವಕ್ಕೆ ವಿದ್ಯಾಮಂತ್ರಿಗಳು

ಸರಿಯಾದ ಉತ್ತರಕೊಡುತ್ತಾರೆಂದು ತಿಳಿದು ಕೊಂಡಿದ್ದೆ; ಆದರೆ ಸರಿಯಾದ ಉತ್ತರಬರಲಿಲ್ಲ. ಹಣ ಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ಯಾರು ಸುಧಾರಣೆಯನ್ನು ಸೂಚಿಸಿದರೋ ಅವರೂ ಸರಿಯಾದ ವಿವರಣೆ ಕೊಡಲಿಲ್ಲ. ಸುಧಾರಣೆಯನ್ನು ಜಾರಿಗೆತರಬೇಕಾದರೆ ಎಷ್ಟು ಹಣ ಬೇಕು, ಏನೇನು ಅನುಕೂಲತೆಗಳು ಬೇಕು, ಇದೆಲ್ಲವನ್ನೂ ಯಾವಾಗ ಸಿದ್ಧಪಡಿಸಿಕೊಳ್ಳಬಹುದು ಯಾವಾಗ ಪ್ರಾರಂಭ ಮಾಡಬಹುದು ಎಂಬುದು, ಸುಧಾರಣಾ ಸಮಿತಿಯ ವರದಿಯಲ್ಲಿಯೂ ನಮೂದಾಗಿಲ್ಲ; ಮಂತ್ರಿಗಳನ್ನು ಕೇಳಿದರೆ, ನಾವು ಪ್ರಯತ್ನ ಮಾಡಿದರೆ ಆಗುತ್ತದೆ ಎಂದು ಹೇಳುತ್ತಾರೆಯೇ ಹೊರತು, ಇದಕ್ಕೆ ಬೇಕಾದ ಹಣವನ್ನು ಎಲ್ಲಿಂದ ಮತ್ತು ಯಾವಾಗ, ಹೇಗೆ ಒದಗಿಸುತ್ತಾರೆಂಬುದನ್ನು ಶ್ರೀ ಇಮಾಂರವರು ಕೇಳಿದರೂ ಹೇಳಿಲ್ಲ. ಆದುದರಿಂದ ಮುಂದೆ ಈ ವಿಷಯದಲ್ಲಿ ಪ್ರಶ್ನೆ ಹಾಕುವುದಕ್ಕಿಂತ, ಸುಧಾರಣೆಯ ಮೇಲೆ ನನ್ನ ಅಭಿಪ್ರಾಯಕೊಡುತ್ತಾ ಮಧ್ಯದಲ್ಲೇ ಅಗತ್ಯಕಂಡರೆ ಪ್ರಶ್ನೆ ಹಾಕುತ್ತೇನೆ.

ವಿದ್ಯಾಭ್ಯಾಸದ ಸುಧಾರಣೆ ಅಗತ್ಯವೆಂಬುದನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳಬೇಕು, ಈಗಿನ ವಿದ್ಯಾಭ್ಯಾಸಕ್ರಮ ಪ್ರಾರಂಭವಾದುದು 1854ರಲ್ಲಿ, ಸುಮಾರು ನೂರು ವರ್ಷವಾಯಿತು. ಈಗಿನ ಆಂಗ್ಲ ವಿದ್ಯಾಭ್ಯಾಸ ಪದ್ಧತಿ ಮೈಸೂರು ದೇಶದಲ್ಲಿ ಜಾರಿಗೆ ಬಂದದ್ದು ಆಗ. ಇನ್ನೊಂದು ವರ್ಷ ಕಳೆದರೆ ಇದಕ್ಕೆ ಸೆಂಟನರಿ ಅಥವಾ ಶತಮಾನೋತ್ಸವ ಮಾಡಬಹುದು. ಇದು ಹಾಗಿರಲಿ; ಇದು ಇಂಡಿಯಾದೇಶದ ಪರಿಸ್ಥಿತಿಗನುಗುಣವಾಗಿದೆಯೇ ಅಥವಾ ಇಲ್ಲವೆ ಎಂಬ ವಿಚಾರದಲ್ಲಿ, ಇದು ಆಂಗ್ಲ ವಿದ್ಯಾಭ್ಯಾಸ ಕ್ರಮ, ಇದರಿಂದ ನಮ್ಮ ದೇಶ ಹಾಳಾಗಿದೆ, ಆಂಗ್ಲರು ನಮ್ಮನ್ನು ಗುಲಾಮರನ್ನಾಗಿ ಮಾಡುವುದಕ್ಕಾಗಿ ತಂದ ಪದ್ಧತಿ ಇದು ಎಂಬ ಕೂಗು ದೇಶಾದ್ಯಂತ ಎದ್ದಿದೆ. ಆದರೂ ಈ ವಿದ್ಯಾಭ್ಯಾಸವನ್ನು ಕಲಿತೇ ನಾವು ಈಗಿನ ಪರಿಸ್ಥಿತಿಯಲ್ಲಿದ್ದೇವೆ, ಸ್ವತಂತ್ರರಾಗಿದ್ದೇವೆ. ಈಗಿರುವ ಪದ್ಧತಿ ಒಂದು ಕಾಯಿಲೆ ಎಂದು ಒಂದು ವೇಳೆ ತಿಳಿದು ಕೊಂಡರೆ ಇದನ್ನು ಗುಣಪಡಿಸುವುದಕ್ಕೆ ಪ್ರಯತ್ನ ಮಾಡುವುದು ನ್ಯಾಯ. ಈಗಿರುವುದನ್ನು ನಿರಪಡಿಸುವುದು ನ್ಯಾಯ. ಆದರೆ ಕಾಯಿಲೆಯನ್ನು ನಿರಪಡಿಸುವುದಕ್ಕೆ ಒದುರಿಗೆ ಕಂಡ ಸೊಪ್ಪು, ಮರ ಎಲ್ಲವನ್ನೂ ತಿಂದರೆ ಗುಣವಾಗುತ್ತದೆಯೆ! ಅಥವಾ ಇಂಥ ರೋಗಕ್ಕೆ ಔಷಧವಿದ್ದರೆ ಅದನ್ನು 40 ದಿನ ತೆಗೆದು ಕೊಳ್ಳಬೇಕಾಗಿದ್ದರೆ, ಹಾಗೆ ಮಾಡುವುದಕ್ಕೆ ಬದಲು ಒಂದು ದಿವಸ ತೆಗೆದುಕೊಂಡು ಗುಣವಾಯಿತೆಂದು ಮಿಕ್ಕುದನ್ನು ಬಿಟ್ಟರೆ ಏನು ಪ್ರಯೋಜನ? Piece-meal ಆಗಿ ಇಂಥಾ ಒಂದು ಕೆಲಸಮಾಡಿ ಉದ್ಧಾರವಾಗಿರುವವರನ್ನು ನಾನು ಎಲ್ಲೂ ಕಂಡಿಲ್ಲ. ಇದನ್ನು ಕಾರ್ಯಗತ ಮಾಡಬೇಕಾದರೆ, ದೇಶದಲ್ಲಿ ಎಲ್ಲ ಹಣವನ್ನೊದಗಿಸಬೇಕೋ, ಎಲ್ಲ ಇತರ ನಲಕರಣೆಗಳನ್ನೊದಗಿಸಬೇಕೋ, ಅದೆಲ್ಲವನ್ನೂ ಒದಗಿಸಿ ಜಾರಿಗೆ ತರೋಣ, ಇದು ಸಾಧ್ಯವಿಲ್ಲದೆ ನುಮ್ಮನೆ ಪ್ರಯತ್ನಮಾಡೋಣ ಎನ್ನುವುದನ್ನು ನಾನಂತೂ ಒಪ್ಪುವುದಿಲ್ಲ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದು ಅಗತ್ಯ. ದೇಶದ ಮುಂದಿನ ಆಗುಹೋಗುಗಳು ಇದರಲ್ಲ ಸೇರಿಕೊಂಡಿವೆ. ಇದರಲ್ಲ ನಾವೇನಾದರೂ ತಪ್ಪುಹೆಜ್ಜೆ ಇಡುವುದಾದರೆ ದೇಶದಲ್ಲಿ ಆಗಬಾರದ ಅನಾಹುತ ವಾಗುತ್ತದೆ. ಈಗೇನೂ ನಾವು ಗುಲಾಮಗಿರಿಯಲ್ಲಿಲ್ಲ; ಪ್ರಪಂಚದ ಇತರ ನಾಗರಿಕ ದೇಶಗಳಿಗಿಂತ ಹಿಂದಾಗಿಲ್ಲ. ಆದುದರಿಂದ ಸಾಧ್ಯವಾದಷ್ಟು ನಮ್ಮನ್ನು ಯಾವುದು ಉಚ್ಚಾಯಸ್ಥಿತಿಗೆ ತಂದಿತೋ ಅದನ್ನು ಕಾಲನಿಂದ ನೂಕಿ ಅದರ ಸ್ಥಳದಲ್ಲಿ ಹೊಸದೊಂದನ್ನು ತಂದು, ತಪ್ಪು ಹೆಜ್ಜೆ ಇಟ್ಟು ಅಧಃಪಾತಾಳಕ್ಕೆ ಬೀಳುವುದಕ್ಕೆ ಬದಲು, ನಾವು ಮಾಡುವ ಕೆಲಸದಲ್ಲಿ ನಿರ್ದಿಷ್ಟವಾಗಿರೋಣ. ನನ್ನ ಅಭಿಪ್ರಾಯದಲ್ಲಿ ಈ ಸುಧಾರಣೆ ನಾಲ್ಕರಲ್ಲೊಂದು ಭಾಗವೂ ಸರಿಯಾಗಿಲ್ಲವೆಂದು ಹೇಳುವುದಕ್ಕೆ ನಾನು ಎದ್ದು ನಿಂತಿದ್ದೇನೆ.

ಮೊದಲನೆಯದಾಗಿ, ನರ್ಸರಿ ವಿದ್ಯಾಭ್ಯಾಸ, ಮೂರನೆಯ ವರ್ಷದಿಂದ ಆರುವರ್ಷದವರೆಗೆ ನಡೆಯಬೇಕಾದುದು. ಇದರ ವಿಷಯದಲ್ಲಿ ಒಂದೇ ಸಾರಿ ಒಂದೇ ಮಾತಿನಲ್ಲಿ, ಇದನ್ನು ನಾವು ವಹಿಸುವುದಕ್ಕಾಗುವುದಿಲ್ಲ, ಸ್ಥಳೀಯ ಸಂಸ್ಥೆಗಳೂ ಸಾರ್ವಜನಿಕ ಸಂಸ್ಥೆಗಳೂ ಮಾಡಬೇಕೆಂದು ಮಂತ್ರಿಗಳು ಹೇಳಿಬಿಟ್ಟರು. ಇವರು ಎಷ್ಟುಮಟ್ಟಿಗೆ ಎಂಥದೇ ವಾಕ್ಯದಲ್ಲಿ ಹೇಳಿ ಮುಗಿಸಿದರೋ ಹಾಗೆಯೇ ಸುಧಾರಣಾ ಸಮಿತಿಯವರೂ ಇಷ್ಟೇ ಸುಲಭವಾಗಿ ಹೇಳಿದ್ದಾರೆ. ಯಾವ ಸ್ಥಳೀಯ ಸಂಸ್ಥೆ ಈ ದಿನ ನರ್ಸರಿ ಸ್ಕೂಲುಗಳನ್ನು ನಡೆಸಿಕೊಂಡು ಬರುತ್ತಿದೆ! ಸ್ಥಳೀಯ ಸಂಸ್ಥೆಗಳ ಉತ್ಪತ್ತಿ ಎಷ್ಟಿದೆ, ಅವುಗಳಿಗೆ ಶಕ್ತಿ ಎಷ್ಟಿದೆ ಎಂಬುದನ್ನು ಯೋಚಿಸಲಿ! ಸರ್ಕಾರದವರು ನಾವೂ ಕೈರಾದಮಟ್ಟಿಗೆ ಸಹಾಯ ಮಾಡುತ್ತೇವೆ ಎಂದ ಮಾತ್ರಕ್ಕೇ ಅದು ಸಾಧ್ಯವೆ! ಇದುವರೆಗೂ ಭಾರತದಲ್ಲಲ್ಲ, ಅದರಲ್ಲಿಯೂ ಮೈಸೂರಿನಲ್ಲಿ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಸಾರ್ವಜನಿಕರಿಗೆ ಬಿಟ್ಟುಕೊಟ್ಟಿದ್ದೇವೆಯೇ?

2 P.M.

6 ವರ್ಷದ ಮಗು—ಇದು ಬೀದಿಯಲ್ಲಿ ಓಡಾಡಿಕೊಂಡು, ಉಸಿರಾಡುವ ಎರಡು ಕಣ್ಣುಗಳಿರತಕ್ಕಂಥ ಒಂದು ವಸ್ತು. ಇಂಥ ಒಂದು ವಸ್ತುವಿನ ಸುಧಾರಣೆಯಲ್ಲಿ ತಾವೀಗ ಕೈಹಾಕಲು ಹೊರಟಿದ್ದೀರಿ. ಆದರೆ ಇದರಿಂದ ನಮಗೇನೂ ಪ್ರಯೋಜನವಾಗುವುದಿಲ್ಲ. ಅಷ್ಟೇ ಅಲ್ಲದೆ ಈ ನರ್ಸರಿ ಸ್ಕೂಲುಗಳ ವೆಚ್ಚವನ್ನು ಹುಡುಗರ ತಂದೆತಾಯಿಗಳೂ ಮತ್ತು ಸಾರ್ವಜನಿಕರೂ ವಹಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಅದನ್ನು ಇವರೇ ಹೇಳಬೇಕೋ?.....

ಶ್ರೀ ಎ. ಜಿ. ರಾಮಚಂದ್ರರಾವ್.—ಈ ನರ್ಸರಿ ಸ್ಕೂಲುಗಳಿಗೆ ಸರ್ಕಾರದವರ ಸಹಾಯವೇನೂ ಇಲ್ಲವೆಂಬುದಾಗಿ ಹೇಳುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲ ಸ್ಥಳೀಯ ಸಂಸ್ಥೆಗಳು ನಡೆಸಲಾಗುತ್ತಿರುವ ವಿದ್ಯಾ ಸಂಸ್ಥೆಗಳಿಗೆ ಶೇಕಡ 75ರಷ್ಟು ಎಂದರೆ ಆ ಸಂಸ್ಥೆಗಳ ಮುಕ್ಕಾಲು ಭಾಗದ ಖರ್ಚನ್ನು ಸರ್ಕಾರದವರೂ ಮತ್ತು ಇನ್ನುಳಿಯತಕ್ಕ 25ರಷ್ಟನ್ನು ಎಂದರೆ ನಾಲ್ಕನೆಯ ಒಂದು ಭಾಗದಷ್ಟನ್ನು ಸಾರ್ವಜನಿಕರೂ ವಹಿಸುತ್ತಿದ್ದಾರೆ. ಇನ್ನು ಸಿಟಿ ಪ್ರದೇಶಗಳಲ್ಲ ಅಂಥ ಖಾಸಗೀ ವಿದ್ಯಾ ಸಂಸ್ಥೆಗಳ ವೆಚ್ಚದಲ್ಲಿ ಅರ್ಧವನ್ನು ಸರ್ಕಾರದವರೂ, ಇನ್ನರ್ಧವನ್ನು ಸಾರ್ವಜನಿಕರೂ ವಹಿಸುತ್ತಿದ್ದಾರೆ. ಇಂದಿಗೂ ಅವುಗಳೆಲ್ಲಾ ಹೀಗೆಯೇ ನಡೆದುಕ್ಕೊಂಡುಬರುತ್ತಿವೆ.

ಶ್ರೀ ಎ. ಭೀಮಪ್ಪನಾಯಕ್.—ಇರಬಹುದು ನಾನು ಅವರು ಸಹಾಯಮಾಡುವುದಿಲ್ಲ ಎಂದು ಹೇಳಲಿಲ್ಲ. ಆದರೆ ಅವರ ವರಿಯರ್ಲಾಗಲಿ ಅಥವಾ ಮಂತ್ರಿಗಳು ಕೊಟ್ಟ ಹೇಳಿಕೆಯರ್ಲಾಗಲಿ ಇದಕ್ಕೆ ಬೇಕಾಗುವ ಹಣದ

(ಶ್ರೀ ಎ. ಭೀಮಪ್ಪನಾಯಕ್.)

ಬಗ್ಗೆ ಯಾವುದನ್ನೂ ಸ್ಪಷ್ಟಪಡಿಸಿರುವುದಿಲ್ಲ. ಇಲ್ಲಿಯವರೆಗೂ ಎಲ್ಲಿಯೂ ಸ್ವಾಭಿಪ್ರಾಯವಾಗಿ ಇರತಕ್ಕಂಥ ಈ ನರ್ಸರಿ ಸ್ಕೂಲುಗಳನ್ನು ಪ್ರಾರಂಭಿಸಲು ಸಾರ್ವಜನಿಕರು ಮುಂದೆ ಬಂದರೆ, ಅವರು ನಮ್ಮ ಸಹಾಯವನ್ನು ಕೋರಿದರೆ ಎಂದು ಹೇಳುವುದಕ್ಕೆ ಇದು 'ರೆ' 'ಬಹುದು' ರಾಜ್ಯದ ಕಾಲವಲ್ಲ; ಇಂದು 'ಇಹುದು' ರಾಜ್ಯದ ಕಾಲ. ಇಂದು ನಾವು ಯಾವ ಕಾಲದಲ್ಲಿದ್ದೇವೆ ಎಂಬುದನ್ನು ಯೋಚಿಸಬೇಕು. ಅವರು ಮುಂದೆ ಬಂದರೆ, ಈ ಕಾರ್ಯವನ್ನು ಕೈಕೊಂಡರೆ, ಅವರು ನಮ್ಮ ಸಹಾಯ ಕೋರಿದರೆ, ಆಗ ನಾವು ಕೊಡುವುದಕ್ಕೆ ಆರೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈಗ ದೇಶದಲ್ಲಿ ಅಂಥ ನರ್ಸರಿ ಸ್ಕೂಲುಗಳು ಎಷ್ಟಿವೆ? ಒಂದು ವೇಳೆ ಇದ್ದರೂ ಅಲ್ಲಿ ಎಷ್ಟು ಜನ ಬಾಲಕರಿರುತ್ತಾರೆ, ಇದರಿಂದ ಹೀಗೆ ಎಷ್ಟು ಜನಗಳಿಗೆ ಪ್ರಯೋಜನವಾಗುತ್ತಿದೆ, ಎಂಬುದನ್ನೂ ಸ್ವಲ್ಪ ಗಮನಿಸಬೇಕಾಗಿದೆ. ಈಗ ನಮ್ಮ ಸಂಸ್ಥಾನದಲ್ಲಿರುವ 90 ಲಕ್ಷ ಪ್ರಜಾಸಂಖ್ಯೆಯಲ್ಲಿ ನಾಲ್ಕುಭಾಗ ಮಾಡಿದರೆ ಅದರಲ್ಲಿ ಒಂದು ಭಾಗ ಎಂದರೆ 25 ಲಕ್ಷ ಮಕ್ಕಳಿದ್ದಾರೆಂದು ಹೇಳಬಹುದು. ಹೀಗೆ ಇಂದು ದೇಶದಲ್ಲಿ 25 ಲಕ್ಷ ಮಕ್ಕಳಿದ್ದರೆ, ಇಂಥ ಮಕ್ಕಳಿಗೆಲ್ಲಾ ಎಂದರೆ 3 ವರ್ಷದಿಂದ 6 ವರ್ಷ ವಯಸ್ಸಿನೊಳಗಿರುವಂಥ ಮಕ್ಕಳಿಗೆಲ್ಲಾ ಮೈಸೂರು ಸಂಸ್ಥಾನದಲ್ಲಿ ಇಂಥ ಎಷ್ಟು ಸ್ಕೂಲುಗಳನ್ನು ಏರ್ಪಡಿಸಿದ್ದಾರೆ! ಈ ದಿವಸ ಸಾರ್ವಜನಿಕರು ಇಂಥ ಒಂದು ಹೊರೆಯನ್ನು ಹೊರತಕ್ಕ ಶಕ್ತಿ ಹೊಂದಿದ್ದರೆ ತಾವೇಕೆ ಈ ದಿವಸ ಇಂಥ ಒಂದು ಸುಧಾರಣೆಯನ್ನು ಕೈಕೊಳ್ಳುವ ಅವಶ್ಯಕತೆಯಿತ್ತು? ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಇದನ್ನು ಅವರವರೇ ಮಾಡುತ್ತಿದ್ದಾರೆ. ಅದರಂತೆ ನಾವು ಇಲ್ಲಿಯೂ ಮಾಡಬೇಕೆಂದು ಹೇಳಿರುವುದು ಅರ್ಥವಿಲ್ಲದ ಮಾತಾಗುತ್ತದೆ. ಹಾಗೆ ಸಹಾಯವನ್ನು ಸಾರ್ವನಿಜಕರಿಂದ ಪಡೆಯುವುದು ಬಹಳ ಕಷ್ಟ.

ಇನ್ನು ಪ್ರೈಮರಿ ಸ್ಕೂಲುಗಳ ವಿಚಾರಕ್ಕೆ ಬರೋಣ. ಪ್ರೈಮರಿ ಸ್ಕೂಲಿನಿಂದ ಸೆಕೆಂಡರಿ ಸ್ಕೂಲಿಗೆ ಹೋಗುವುದಕ್ಕೆ ಮುಂಚೆ, ಪ್ರೈಮರಿ ನಾಲ್ಕು ವರ್ಷ, ಮಿಡ್ಲ್ ಸ್ಕೂಲಿನಲ್ಲಿ ನಾಲ್ಕು ವರ್ಷ—ಹೀಗೆ ಎಂಟು ವರ್ಷಗಳ ಕಾಲ ಬಾಲಕರು ಯಾವ ಪ್ರತಿಫಲವನ್ನು ಕೊಡದೆ ಉಚಿತವಾಗಿ ವಿದ್ಯಾಭ್ಯಾಸದ ಸೌಕರ್ಯವನ್ನು ಇಲ್ಲಿಯ ತನಕ ಪಡೆಯುತ್ತಾ ಬಂದಿದ್ದಾರೆ ಹೀಗೆ ಅವರು ಯಾವ ಸ್ಕೂಲಿನಲ್ಲೂ ಸರ್ಕಾರಕ್ಕೆ ಯಾವ ಒಂದು ಶುಲ್ಕವನ್ನೂ ಕೊಡದೆ 8 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡುತ್ತಾರೆ. ಈಗ ಇರುವ ನಮ್ಮ ಕಾನ್ಸ್ಟಿಟ್ಯೂಷನ್ನಿನಲ್ಲಿ ಹೇಳಿರುವಂತೆ " The State shall endeavour to provide for free and compulsory education for all children until they complete the age of fourteen years." ಇಲ್ಲಿ ಹೇಳಿರತಕ್ಕ "shall endeavour" ಎಂಬ ಪದಗಳಿಗೆ ಪ್ರಯತ್ನಮಾಡಬೇಕು ಎಂದು ಅರ್ಥವಾಗುತ್ತದೆ. ಯಾವ ನಮ್ಮ ಈಗಿನ ವಿದ್ಯಾಭ್ಯಾಸದ ಪದ್ಧತಿಯನ್ನು ಒಂದಾವರ್ತಿ 6 ವರ್ಷಗಳಿಗೆ ಲಿಮಿಟ್ ಮಾಡುತ್ತೇವೆಂದೂ ಇನ್ನು ಕೆಲವು ಕಡೆ 7 ವರ್ಷಗಳಿಗೆ ಲಿಮಿಟ್ ಮಾಡುತ್ತೇವೆಂದೂ ಇನ್ನೊಂದು ಸಲ 8 ವರ್ಷಗಳಿಗೆ ಲಿಮಿಟ್ ಮಾಡುತ್ತೇವೆಂದೂ ಹೇಳುವುದಾದರೆ ಆಗ ಈ endeavour ಅನ್ನುವುದರಲ್ಲಿ ಅರ್ಥವಿಲ್ಲದಂತಾಗುತ್ತದೆ. ಕಾನ್ಸ್ಟಿಟ್ಯೂಷನ್ನಿನಲ್ಲಿ ಹೇಳಿರುವ ಫಂಡಮೆಂಟರ್ ರೈಟ್ಸ್ ಪ್ರಕಾರ ದೇಶದಲ್ಲರತಕ್ಕ ಪ್ರತಿಯೊಬ್ಬ ಹುಡುಗನಿಗೂ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕೆಂದಿದೆ. ಇದರ ಪ್ರಕಾರ ಇಲ್ಲಿಯವರೆಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ 6ನೆಯ ವರ್ಷದಿಂದ 8 ವರ್ಷಗಳ ಕಾಲ ಉಚಿತ ವಿದ್ಯಾಭ್ಯಾಸದ ಫಲವನ್ನು ಪಡೆಯುತ್ತಿದ್ದಾನೆ. ಹೀಗಿರುವಾಗ ಆ 8 ವರ್ಷಗಳ ಅವಧಿಯನ್ನು 6 ವರ್ಷಗಳಿಗೆ ಇಳಿಸಿ ಅವನಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ತಾವು ಫೀಜ್ ಹಾಕುತ್ತೇವೆಂದರೆ, is it progressive? It is retrograde. ಇದು ಬರಿ ಒಂದು retrograde ಅಲ್ಲ I call it reactionary.

ಇನ್ನು ಮುಂದೆ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಏನು ಮಾಡುತ್ತೀವೆಂದರೆ, ಇದುವರೆಗೂ ಒಬ್ಬ ಹುಡುಗ 5 ಗಂಟೆಗಳ ಕಾಲ ವಿದ್ಯಾಭ್ಯಾಸ ಮಾಡುತ್ತಿದ್ದ; ಇನ್ನು ಮೇರೆ ಈ 6 ವರ್ಷದ ಹುಡುಗ ಅಪ್ಪನ ಜೊತೆಯಲ್ಲಿದ್ದುಕೊಂಡು ದನಕಾಯುವುದೋ, ಹುಲ್ಲು ಹೊರುವುದೋ ಇತ್ಯಾದಿಯಾವುದನ್ನಾದರೂ ಸಹಾಯ ಮಾಡಬೇಕೆಂದು ಹೇಳಲಾಗಿದೆ. To help his father ಎಂತ ಹೇಳಿದೆ. ಈ 6 ವರ್ಷದ ಹುಡುಗನು ಅತನ ತಂದೆಗೆ ಏನು ಸಹಾಯಮಾಡಬಲ್ಲನು? 6 ವರ್ಷದ ಹುಡುಗನಿಗೆ ಇದು ರಿಸೆಪ್ಟಿವ್ age ಆಗಿರುತ್ತದೆ, ಅನೇಕ ವಿಷಯಗಳನ್ನು ಸಂಗ್ರಹಮಾಡುವ ಕಾಲ. ಇಂಥಕಾಲದಲ್ಲಿ ಈ ಬಾಲಕನು ರಂಟೆಹೊಡೆಯುವುದು, ಕುಂಟೆ ಹೊಡೆಯುವುದು, ಎತ್ತು ಮುಂದೆ ಹೋದರೆ ಹಿಂದೆ ನಗಣಿ ಎತ್ತುವುದಕ್ಕೆ ಹೋದರೆ ಎಷ್ಟೋ ಸಹಾಯ ಮಾಡಿದಂತಾಗುತ್ತದೆ ಎನ್ನುವುದಾಗಿದ್ದರೆ ಈ type of education ಮೂಲಪದ್ಧತಿಯೂ ಅಲ್ಲ, ಈಗಿನ ಪದ್ಧತಿಯೂ ಅಲ್ಲ. ಇದನ್ನು ತಾವು ಮಧ್ಯಮವರ್ತಿ ಎಂದು ಹೇಳಿದರೆ ನಾನು ಇದನ್ನು ಕರೆಯುವುದು "ಇಬ್ಬಂದಿ" ಎಂದು.

ಈ ದಿವಸ ಹಳ್ಳಿಯಲ್ಲಿ ಯಾವ ರೀತಿ ವಿದ್ಯೆ ಕಲಸುತ್ತಿದ್ದಾರೆ? ವ್ಯವಸಾಯ ಮಾಡುವುದನ್ನು ಕಲಿಸಿಕೊಡುತ್ತಾರೆಯೆ? ಹಾಗಾದರೆ ನಮ್ಮ ದೇಶದಲ್ಲರತಕ್ಕ 16—17 ಸಾವಿರ ಹಳ್ಳಿಗಳ ಪೈಕಿ ಹನ್ನೆರಡು ಸಾವಿರ ಹಳ್ಳಿಗಳಲ್ಲಿ ಪ್ರೈಮರಿ ಪಾಠಶಾಲೆಗಳಿವೆ. ಈ ಹನ್ನೆರಡು ಸಾವಿರ ಪಾಠಶಾಲೆಗಳಲ್ಲಿ ವ್ಯವಸಾಯ ಕಲಸುವುದು ಒಂದು, ಬಟ್ಟೆನೇಯುವುದು ಒಂದು ವಿದ್ಯೆ, ಬಡಗಿತನ, ಕಮ್ಮಾರಿಕೆ, ಕ್ಷೌರಮಾಡುವುದು, ಅಗಸರಂತೆ ಬಟ್ಟೆ ಒಗೆಯುವುದು, ಹೀಗೆ ಬಾರಾ ಬಲೂತಿಗೆ ಸಂಬಂಧಪಟ್ಟ ಹನ್ನೆರಡು ಬಗೆಯ ವಿದ್ಯೆಗಳನ್ನೂ, ಹುಡುಗರಿಗೆ ಕಲಸಬೇಕಾಗಿದೆ. ಈಗಿರುವ ಪ್ರೈಮರಿ ಪಾಠಶಾಲೆಗಳಲ್ಲಿ ಈ ಹನ್ನೆರಡು ವಿದ್ಯಾಭ್ಯಾಸಗಳನ್ನೂ ಕಲಿಸಿ ಕೊಡಲು ಏನು ಏರ್ಪಾಡು ಮಾಡಿರುತ್ತೀರಿ?

What is the training that you are going to give to that teacher? How will he be able to give that training to the boys? ಒಬ್ಬ ಹುಡುಗ ಹೊಲಗೆ ಕೆಲಸ ಕಲಿಯಬೇಕೆಂಬುದಾಗಿ ಸ್ಕೂಲಿಗೆ ಬಂದರೆ ಆಗ ನಮ್ಮಲ್ಲಿ ಹೊಲಗೆ ಯಂತ್ರವಿಲ್ಲ. ನಿನಗೆ ಕ್ಷೌರಮಾಡುವುದನ್ನು ಕಲಿಸಿಕೊಡುತ್ತೇವೆ ಬಾ ಎಂದರೆ ಆ ಹುಡುಗನು ಅದಕ್ಕೆ ಒಪ್ಪುತ್ತಾನೇನು?

Sri L. SIDDAPPA (Channagiri).— I want to know if the Member is offering only preliminary remarks or he is entering into a discussion?

Sri A. BHEEMAPPA NAIK.—These are all remarks. But I am going to condemn the scheme outright.

Sri J. MOHAMED IMAM.—I rise to a point of order, Sir. In order to maintain the dignity and prestige of this House and when the Members are taking part in a debate on a very important issue, the concerned Minister must be present here. In order to maintain the dignity and prestige of this House, it is quite proper and appropriate that the concerned Minister is present in this House. Otherwise, if the concerned Minister is absent, then we have to presume that he is showing scant courtesy to this House.

Mr. SPEAKER.—He has gone out with my permission. He will be returning in five minutes. Sri Mohamed Imam who pleads for the maintenance of dignity of the House is himself violating it because he is not hearing me at all. The Member has raised a point and while it is being answered, he is going on discussing with other Hon'ble Members of the House.

Sri J. MOHAMED IMAM.—I am sorry. I was interrupted. But I have been hearing every word that the Speaker has said.

Mr. SPEAKER.—In the meanwhile till his return. the Hon'ble Minister for Local Self-Government is noting down the points raised by the Members.

Sri J. MOHAMED IMAM.—I submit to the Chair for future guidance that it would be better if he intimates to the House before hand the absence of any Minister. In that case I would not have raised the question.

ಶ್ರೀ ಎ. ಭೀಮಪ್ಪನಾಯಕ್.—ಹಳ್ಳಿಗಳಲ್ಲಿರುವ ಹುಡುಗರಿಗೆ ವೃತ್ತಿಶಿಕ್ಷಣ ಕೊಡುತ್ತೇವೆಂದು ಹೇಳಿರುತ್ತೀರಿ. ಆದರೆ ವೃತ್ತಿಶಿಕ್ಷಣಕ್ಕೆ ಬೇಕಾದಂಥ ಉಪಾಧ್ಯಾಯರನ್ನು ತಯಾರುಮಾಡುವುದಕ್ಕೆ ಬಹಳ ಕಷ್ಟವಿದೆ. ಅವರಿಗೆ ಈ ಎಲ್ಲಾ ವೃತ್ತಿಗಳನ್ನೂ ಹೇಳಿಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ, ಪ್ರತಿಯೊಬ್ಬರೂ ಒಂದೇ ಯೂನಿಫಾರಂ ವೃತ್ತಿಯನ್ನು ಕೈಕೊಳ್ಳಬೇಕೆಂದರೆ ಅದು ಬಹಳ ಕಷ್ಟ, ಇದೂ ಆಗದ ಮಾತು.

ಈಗ ಟ್ರೌಟ್, ಸಿಟಿ ಮತ್ತು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿರುವ ಹುಡುಗರ ವಿಚಾರವನ್ನು ತೆಗೆದುಕೊಳ್ಳೋಣ: ಇಲ್ಲರತಕ್ಕವರಿಗೆಲ್ಲಾ ವೃತ್ತಿಶಿಕ್ಷಣದಲ್ಲಿ ಯಾವ ವೃತ್ತಿಯನ್ನು ಹೇಳಿಕೊಡುತ್ತೀರಿ? ಎರೆಕ್ಟ್ರಿಕರ್ ವೈರಿಂಗ್‌ಮಾಡುವ ವೃತ್ತಿಯೇ, ಮೆಷಿನೆರಿ ತಯಾರುಮಾಡುವ ವೃತ್ತಿಯೇ, ವ್ಯವಸಾಯವೃತ್ತಿಯೇ ಅನ್ನುವುದನ್ನು ತಾವಿಲ್ಲಿ ನಿರ್ದಿಷ್ಟವಾಗಿ ತಿಳಿಸಿಲ್ಲ. ಆದರೆ ಪಟ್ಟಣಗಳಲ್ಲರುವ ಪದ್ಧತಿ ಯಾವುದು, ಅಲ್ಲರತಕ್ಕ ವಾತಾವರಣ ಎಂತಹುದು, ಹಳ್ಳಿಗಳಲ್ಲರುವ ಪದ್ಧತಿ ಮತ್ತು ಅಲ್ಲರುವ ವಾತಾವರಣ ಯಾವುದು? ಹೀಗೆ ಒಂದಕ್ಕೊಂದು ವಿರುದ್ಧವಾಗಿರುವ ಎರಡು ವಾತಾವರಣಗಳಲ್ಲರುವ ಹುಡುಗರಿಗೆ ಪಾಠ ಹೇಳಿಕೊಟ್ಟ ಮೇಲೆ, ಅಂಗಡಿಯಲ್ಲಿ ಸಹಾಯಮಾಡು ಎಂದು ಕಳುಹಿಸಿಕೊಡುತ್ತೀರಾ? ಅಥವಾ ಜಮೀನು ಮಾಡುವ ಪದ್ಧತಿಯನ್ನೇ ಎಲ್ಲಾ ಕಡೆಗಳಲ್ಲೂ ಹೇಳಿಕೊಡುತ್ತೀರಾ? ಎಲ್ಲಾ ವಿದ್ಯಾರ್ಥಿಗಳಿಗೂ ವ್ಯವಸಾಯದಲ್ಲಿ ತಿಳಿವಳಿಕೆ ಕೊಡಬೇಕಾಗಿದ್ದರೆ, ಈ 12 ಸಾವಿರ ಪಾಠಶಾಲೆಗಳಿಗೂ $12 \times 4 = 48$ ಸಾವಿರ ಎಕರೆ ಜಮೀನೂ, 12 ಸಾವಿರ ಬಾವಿಗಳೂ, 12 ಸಾವಿರ ಇರಿಗೇಷನ್ ಪಂಪಿಂಗ್ ಸೆಟ್ಟುಗಳೂ, ಇಷ್ಟನ್ನೂ ಒದಗಿಸಿ Experimental farm ಮಾಡಿ ಅಲ್ಲಿ ಹುಡುಗರಿಗೆ ವ್ಯವಸಾಯಪದ್ಧತಿಯನ್ನು ಹೇಳಿಕೊಡಲು ಸಾಧ್ಯವೇ? ಟ್ರೌಟ್ ಮತ್ತು ಸಿಟಿ ಪ್ರದೇಶಗಳಲ್ಲಿ ವ್ಯವಸಾಯಕ್ಕೆ ಭೂಮಿ ಇಲ್ಲದಿದ್ದರೆ ಅವರನ್ನೆಲ್ಲಾ ಎಲ್ಲಿಗೆ ಕಳುಹಿಸಿಕೊಡುತ್ತೀರಿ? ಹೀಗೆಲ್ಲಾ ಇರುವುದರಿಂದ ಈ ವೃತ್ತಿಶಿಕ್ಷಣದಲ್ಲಿ ಒಂದು ಯೂನಿಫಾರಂ ಆಗಿ ಇರುವುದು ಕಷ್ಟ. ಇಷ್ಟೆಲ್ಲವನ್ನೂ ಪ್ರಾಕ್ಟಿಕಲ್ ಆಗಿ ನಡೆಸಲು ಸಾಧ್ಯವೇ? ಪ್ರೈಮರಿ ಸ್ಕೂಲು ಸ್ಟೇಜಿನಲ್ಲೇ ಇದೆಲ್ಲವನ್ನೂ ಒದಗಿಸುತ್ತೇವೆಂದರೆ ಇದು ಸಾಧ್ಯವೇ ಎಂಬುದನ್ನು ಬಹಳ ದೀರ್ಘವಾಗಿ ಆಲೋಚನೆಮಾಡಿ. ಈಗ ಪ್ರೈಮರಿ ವಿದ್ಯಾಭ್ಯಾಸದ ಅವಧಿಯನ್ನು 4 ವರ್ಷಗಳಿಂದ 6 ವರ್ಷಗಳಿಗೆ ಹೆಚ್ಚಿಸಿರುವುದರಿಂದ ಅವರಿಗೆ 5 ಮತ್ತು 6ನೆಯ ವರ್ಷದಲ್ಲಿ, ಅನೇಕ ಪ್ರೈಮರಿ ಸ್ಕೂಲನಲ್ಲೇ ಇಂಗ್ಲೀಷನ್ನೂ ಹೇಳಿಕೊಡುತ್ತೇವೆ ಎಂದು ಹೇಳಿದ್ದೀರಿ. ಈಗ ಮಿಡಲ್ ಸ್ಕೂಲನಲ್ಲಿ 4 ವರ್ಷ ಇಂಗ್ಲೀಷ್ ಅಭ್ಯಾಸಮಾಡಿ 5ನೆಯ ವರ್ಷ ಹೈಸ್ಕೂಲಿಗೆ ಹೋದರೆ, ಹುಡುಗರಿಗೆ ಆ ಹೈಸ್ಕೂಲನಲ್ಲಿ ಉಪಾಧ್ಯಾಯರು ಹೇಳಿಕೊಡುವುದು ಅದೇನು ಉರ್ದು ಭಾಷೆಯೋ, ಇಂಗ್ಲಿಷ್ ಭಾಷೆಯೋ ಅನ್ನುವುದೊಂದೂ ಗೊತ್ತಾಗುವುದಿಲ್ಲ. ಹೀಗೆ ಅವರ standard ಇಳಿದು ಹೋಗಿರುವಾಗ, ಅವರಿಗೆ 5-6ನೆಯ ವರ್ಷದಲ್ಲಿ ಎಂದರೆ ಕೇವಲ ಎರಡು ವರ್ಷ ಕಾಲ ಮಾತ್ರ ಇಂಗ್ಲೀಷನ್ನು ಹೇಳಿಕೊಟ್ಟರೆ muttering of English words ಮಾತ್ರ ಕಲಿಸಿಕೊಡಬಲ್ಲರೇ ಹೊರತು, ಹೈಸ್ಕೂಲಿಗೆ ಅವರು ಹೋದಾಗ ಅಲ್ಲಿ ಉಪಾಧ್ಯಾಯರು ಹೇಳಿಕೊಡುವ ಇಂಗ್ಲೀಷ್ ಭಾಷೆಯಾಗಲಿ ಅಥವಾ ಅವರು ಮಾತನಾಡುವುದನ್ನೇ ಆಗಲಿ ತಿಳಿದುಕೊಳ್ಳಲು ಸಾಕಷ್ಟು ಚೈತನ್ಯವಿರುತ್ತದೆಯೇ ಎಂಬುದನ್ನು ತಾವು ಆಲೋಚಿಸಬೇಕು. ಇನ್ನು ಮುಂದಕ್ಕೆ ಮಿಡ್ಲ್ ಸ್ಕೂಲು ಪರೀಕ್ಷೆ ಬೇರೆ ಇಲ್ಲ. ಹುಡುಗರನ್ನೆಲ್ಲಾ ಹಾಗೆಯೇ ಮುಂದಕ್ಕೆ ಕಳುಹಿಸಿ ಕೊಡದೆ ಹೋಗಿ ಪರ್ಸೆಂಟೇಜ್ ಆಫ್ ಪಾಸನ್ನು ಏನಾದರೂ ತಾವು ಕಡಮೆಮಾಡಿದ್ದೇ ಆದರೆ ಈಗ ಏನು ನಗರಗಳಲ್ಲಿ ಸ್ವೀಕೃತಿಯಾಗುತ್ತಿವೆಯೋ ಅವು ಪ್ರತಿಯೊಂದು ಹಳ್ಳಿಯಲ್ಲಿಯೂ ನಡೆಯುವುದಕ್ಕೆ ಪ್ರಾರಂಭವಾಗಿ ಕಡೆಗೆ ಉಪಾಧ್ಯಾಯರನ್ನೇ ಮುಗಿಸಿಬಿಡುತ್ತಾರೆ. ಆದುದರಿಂದ ಅವರೆಲ್ಲರನ್ನೂ ತಡೆಯಿಲ್ಲದಂತೆ ಮೇಲಕ್ಕೆ ಹಾಕಬೇಕಾಗುತ್ತದೆ. ಆಗ ತಾವು ಈಗಿರುವ

(ಶ್ರೀ ಎ. ಭೀಮಪ್ಪನಾಯಕ್.)

ಹೈಸ್ಕೂಲಿನ 5ರಷ್ಟು ಹೈಸ್ಕೂಲನ್ನು ತೆರೆಯಬೇಕಾಗುತ್ತದೆ. ಈಗ ಇರತಕ್ಕ ಸಿಬ್ಬಂದಿಗೇ ಸರಿಯಾಗಿ ಸಂಬಳ ಸಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ.

ಇನ್ನು ಹೈಸ್ಕೂಲುಗಳ ವಿಚಾರಕ್ಕೆ ಬಂದರೆ—ಇಲ್ಲಿ 4 ತರಗತಿಗಳನ್ನು ಮಾಡಿದ್ದೀರಿ. ಇದೂ ಒಂದು ಕಡೆ ಇರಲಿ. ಮೈಸೂರು ದೇಶದಲ್ಲಿ ಒಟ್ಟು 217 ಹೈಸ್ಕೂಲುಗಳಿವೆ. ಇದರಲ್ಲಿ ಸರ್ಕಾರಿ ಹೈಸ್ಕೂಲುಗಳಿರುವುದು ಕೇವಲ 36-37 ಮಾತ್ರ. ಇನ್ನುಳಿದವುಗಳೆಲ್ಲಾ ಮುನಿಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡುಗಳಿಗೆ ಸೇರಿದವುಗಳಾಗಿರುತ್ತವೆ. ಈಗ ಆ ಸ್ಥಳೀಯ ಸಂಸ್ಥೆಗಳವರು ಇರತಕ್ಕ ಭಾರವನ್ನು ಹೊರುವುದೇ ಅವರಿಗೆ ತುಂಬಾ ಕಷ್ಟವಾಗಿದೆ. ಹಾಗಿರುವಾಗ ಅದರ ಜೊತೆಗೆ ಮತ್ತಷ್ಟು ಭಾರವನ್ನು ಈ ನಿಮ್ಮ ಹಗರಣದ ಫಲವಾಗಿ ಅವರ ಮೇಲೆ ಹೇರಲು ಸಾಧ್ಯವೇ? ಅವರನ್ನು ತಾವೀಗ ಈ ಹೆಚ್ಚಿನ ಹಗರಣವನ್ನು ಹೊರತಕ್ಕ ಬಗ್ಗೆ ಕನ್ವಿನ್ಸ್ ಮಾಡಿದ್ದೀರಾ? ಅವರಿಗಾದರೂ ಇದನ್ನು ಹೊರತಕ್ಕ ಶಕ್ತಿ ಇದೆಯೆ? ಒಂದು ವೇಳೆ ಈಗ ಆ ಸ್ಥಳೀಯ ಸಂಸ್ಥೆಗಳು ತಮ್ಮ ಕೋಟಾ ತಾವು ಕೊಡುವುದಾಗಿ ಒಪ್ಪಿಕೊಂಡು ನಾಳೆ ಕೊಡದೆ ಹೋದರೆ ಆಗ ತಾವು ಈ ಇನ್‌ಸ್ಟಿಟ್ಯೂಷನ್‌ಗಳನ್ನು ಮುಚ್ಚಲು ಸಾಧ್ಯವೇ? ಅಂಥ ಪರಿಸ್ಥಿತಿಯಲ್ಲಿ ನಾವಿಲ್ಲ. ಈ ಸ್ಕೂಲುಗಳಿಗೆ ಸರಿಯಾಗಿ ಕಟ್ಟಡಗಳೇ ಇಲ್ಲದಿರುವಾಗ, ಅಲ್ಲಿ ನಾಲ್ಕು ತರಗತಿಗಳನ್ನು ಮಾಡುತ್ತೇವೆ, ಸ್ಥಳಶಕ್ತಿವರ್ಧಕಮಾಡಿಕೊಡಿ ಎಂದು ಕೇಳಿದರೆ ಕಟ್ಟಡಕ್ಕೆ ಯಾವ ರೀತಿ ಮಾಡಬೇಕು? ಅಷ್ಟಕ್ಕೆ ಉಪಾಧ್ಯಾಯರನ್ನು ಓದಿಗಿನತಕ್ಕವರು ಯಾರು? ಇಷ್ಟನ್ನೆಲ್ಲಾ ಏರ್ಪಡಿಸಿಕೊಳ್ಳತಕ್ಕ ಶಕ್ತಿ ಅವರಿಗಿದೆಯೇನು? ಈ ಅಂಶಗಳನ್ನೆಲ್ಲಾ ತಾವು ಆಲೋಚನೆಮಾಡಿದ್ದೀರಾ? ಇದನ್ನೆಲ್ಲಾ ಬಿಟ್ಟರೂ ಕೂಡ ಪ್ರೈಮರಿ ಸ್ಕೂಲಿನ ವಿದ್ಯಾಭ್ಯಾಸದಲ್ಲಿ ಎರಡು ವರ್ಷ ಕಮ್ಮಿ ಮಾಡಿ, ಹೈಸ್ಕೂಲಿನ ವಿದ್ಯಾಭ್ಯಾಸದಲ್ಲಿ ಒಂದು ವರ್ಷ ಕಮ್ಮಿಮಾಡಿ 10 ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ. ಮಾಡಿಕೊಳ್ಳಬೇಕೆಂದು ಹೇಳಿರುತ್ತೀರಿ. All-India Scheme ಪ್ರಕಾರ ಇದು 8+3=11ವರ್ಷ ಎಂದಿದೆ. ತಾವು ಇದನ್ನು 10 ವರ್ಷಕ್ಕೆ ಇಳಿಸಿದರೆ, All-India Scheme ಪ್ರಕಾರ ಅವರು ನಿಮ್ಮ ಹುಡುಗರು ಇನ್ನೂ ಒಂದು ವರ್ಷ ಓದಿ ಹೊರತು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಇವರು ಪಾಸ್‌ಮಾಡಿದಂತೆ ನಾವು ಭಾವಿಸುವುದಕ್ಕಾಗುವುದಿಲ್ಲವೆಂದು ಹೇಳಿದರೆ ಆಗ ನಮ್ಮ ನಿಮ್ಮ ಗತಿಯೇನು? ಆ ಹುಡುಗರ ಗತಿ ಏನು? ಎಲ್ಲ ರಾಷ್ಟ್ರಗಳೂ ಒಂದೇ ಎಂದು ಹೇಳುತ್ತೀರಿ. ಎಲ್ಲ ಕಡೆಗಳಲ್ಲೂ ಒಂದೇ ವಿಧವಾದ ವಿದ್ಯಾಭ್ಯಾಸವಿರಬೇಕೆಂದು ಹೇಳುತ್ತೀರಿ, ರಾಷ್ಟ್ರದ ನಾಯಕರು ಈ ಕೆಲಸಕ್ಕೆ ನೇಮಿಸಿದ್ದ ಶ್ರೀಮಾನ್ ರಾಧಾಕೃಷ್ಣನ್‌ರವರ ವರದಿಯನ್ನು ತರಿಸಿಕೊಂಡಿದ್ದೀರಿ. ಭಾರತದ ಎಲ್ಲ ಕಡೆಗಳಲ್ಲಿಯೂ ಒಂದೇ ವಿಧವಾದ ಪದ್ಧತಿಯಿದ್ದರೆ, ಅದು ನ್ಯಾಯ ಮತ್ತು ಸಂತೋಷ; ಹಾಗಿಲ್ಲದೆ ಮೈಸೂರು ನಾರ್ಮಲ್-ಅಪರೇಟ್‌ಮಾಡಿದರೆ ಇದು ಮಾದರಿಯ ಮೈಸೂರಾಗಿ ಉಳಿಯುವುದಿಲ್ಲ. ಮೈಸೂರಿನ ವಿದ್ಯಾರ್ಥಿಗಳು ಬೇರೆ ಕಡೆಗೆ ಹೋದಾಗ ಅವರು, ಇವರನ್ನು ಯಾವ ಸ್ಕೂಲಿಗೆ ಸೇರಿಸಬೇಕು? ಇಲ್ಲಿಯ ವಿದ್ಯಾಭ್ಯಾಸಕ್ಕೂ, ಬೇರೆ ಕಡೆಗಳಲ್ಲಿರತಕ್ಕ ವಿದ್ಯಾಭ್ಯಾಸಕ್ಕೂ ಯಾವ ರೀತಿಯಲ್ಲಿ ಹೊಂದಾಣಿಕೆ ಇರಬೇಕೆಂಬುದನ್ನು ಯೋಚಿಸದೆ ತಕ್ಷಣವೇ ಬದಲಾವಣೆಮಾಡಿ ಈ ವರ್ಷವೇ ಎಲ್. ಎಸ್. ಪರೀಕ್ಷೆಯನ್ನು ರದ್ದುಮಾಡುತ್ತೇವೆಂದು ಹೇಳಿದರೆ, ಈಗಿರತಕ್ಕ ಶಿಕ್ಷಣ ಪದ್ಧತಿಯು ಡಿಸ್‌ರೊಕೇಟ್ ಆಗಿಹೋಗುತ್ತದೆ. ಆಗ ನಿಮ್ಮ-ನಮ್ಮ ಗತಿಯೇನು? ಈಗಿರತಕ್ಕ ಮಿಡಲ್ ಸ್ಕೂಲು ಕಟ್ಟಡಗಳನ್ನು 5th and 6th year ತರಗತಿಗಳಿಗೆ ಉಪಯೋಗಿಸುತ್ತೀರಾ? ಇವರು ಆ ಕಟ್ಟಡಗಳನ್ನು ಬಿಟ್ಟುಕೊಡುತ್ತಾರೆಯೇ? ಸರ್ಕಾರ-ಇವು ಇಲಾಖೆಯ ಕಟ್ಟಡಗಳು ಬಿಟ್ಟುಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಕಟ್ಟಡಗಳಿಲ್ಲದೆ ಹೇಗೆ ಪಾಠಶಾಲೆಗಳನ್ನು ಪ್ರಾರಂಭಮಾಡುವುದು? ಈ ದಿವಸ ಏನಾಗಿದೆಯೆಂದರೆ—ಮುನಿಸಿಪಾಲಿಟಿಗಳವರು "ಈ ಸ್ಕೂಲುಗಳನ್ನು ನಡೆಸುವುದಕ್ಕೆ ನಮ್ಮ ಕೈಲಾಗುವುದಿಲ್ಲ. ನಮ್ಮ ಮೇಲೆ ತಾವು ಇನ್ನೂ ಹೆಚ್ಚಿನ ಭಾರ ಹಾಕುವುದಾದರೆ—ಅವುಗಳನ್ನು ನೀವೆ ವಹಿಸಿಕೊಳ್ಳಿ" ಎಂದು ಹೇಳುತ್ತಿದ್ದಾರೆ. ಆದರೆ ಅವುಗಳನ್ನೆಲ್ಲ ವಹಿಸಿಕೊಳ್ಳುವುದಕ್ಕೆ ನೀವು ತಯಾರಾಗಿಲ್ಲ. ಅಲ್ಲಿರತಕ್ಕ ಮಾನ್ಯರೇ ಒಂದು, ಸರ್ಕಾರಿ ಶಾಲೆಗಳಲ್ಲಿರತಕ್ಕ ಮಾನ್ಯರೇ ಒಂದು. ಆದರೆ ಈ ಎರಡು ಕಡೆಯ ಉಪಾಧ್ಯಾಯರಿಗೂ ಟ್ರೈನಿಂಗ್ ಆಗಿರುವುದು ಒಂದೇ ಸ್ಥಳದಲ್ಲಿ, ವ್ಯಾಸಂಗನಡೆಸಿರುವುದೂ ಒಂದೇ ಸ್ಥಳದಲ್ಲಿ. ಈ ಎರಡು ಶಾಲೆಗಳ ಇನ್‌ಸ್ಪೆಕ್ಷನ್ ಮಾಡತಕ್ಕ ವರು ಒಬ್ಬರೇ ಅಧಿಕಾರಿಗಳು. ಆದರೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಈ ಉಪಾಧ್ಯಾಯರನ್ನು ವರ್ಗಮಾಡುವುದಕ್ಕೆ ತಾವು ಒಪ್ಪುತ್ತಿಲ್ಲ. ಹೀಗೆ ಸರ್ಕಾರಿ ಶಾಲೆಯಲ್ಲಿರತಕ್ಕ ಉಪಾಧ್ಯಾಯರಿಗೇ ಒಂದು ತರಹ ಟ್ರೀಟ್‌ಮೆಂಟ್ ಮತ್ತು ಈ ಖಾಸಗೀ ಸಂಸ್ಥೆಗಳವರ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರುಗಳಿಗೇ ಒಂದು ತರಹ ಟ್ರೀಟ್‌ಮೆಂಟ್ ತೋರಿಸುತ್ತಾ ಈ ಸ್ಥಳೀಯ ಸಂಸ್ಥೆಗಳ ಉಪಾಧ್ಯಾಯರನ್ನು ಮಲತಾಯಿ ಮಕ್ಕಳನ್ನು ನೋಡುವಂತೆ ಕಾಣುತ್ತಿದ್ದೀರಿ. ಇದರಿಂದ ಈ ದಿವಸ ಅವರಿಗೆ ಒಂದು ಇನ್‌ಫಿರಿಯಾರ್ಟಿಕಾಂಪ್ಲೆಕ್ಸ್ ಬಂದಿದೆ. ಈ ಮುನಿಸಿಪಲ್ ಸ್ಕೂಲುಗಳಿಗೆ ಬಂದರೆ ನಮಗೇನೂ ಮರ್ಯಾದೆಯೇ ಇರುವುದಿಲ್ಲವೆಂಬ ಭಾವನೆ ಅವರಲ್ಲನೇಕರಿಗೆ ಬಂದುಹೋಗಿದೆ. ಇಂಥ ಪರಿಸ್ಥಿತಿಯಲ್ಲಿ 4 ವರ್ಷದ ಶಿಕ್ಷಣದ ಭಾರವನ್ನು ಅವರ ತಲೆ ಮೇಲೆ ಹಾಕಲು ಹೋದರೆ ಅವರು ಒಪ್ಪುತ್ತಾರೆಯೆ? ಆ ರೀತಿ ಮಾಡುವುದಕ್ಕೆ ತಮಗಾದರೂ ಏನು ಅಧಿಕಾರ ವಿದೆ? ತಾವು ಸುಧಾರಣೆಯನ್ನೇನೋ ಮಾಡಬಹುದು. ಆದರೆ ಆದರ ಭಾರವನ್ನು ಹೊತ್ತುಕೊಳ್ಳುವ ಶಕ್ತಿಯಿದ್ದರೆ ಮಾಡಿ. 217 ಹೈಸ್ಕೂಲುಗಳಲ್ಲಿ ಸರ್ಕಾರಿ ಹೈಸ್ಕೂಲುಗಳು ಕೇವಲ 36-37 ಇರುವಾಗ, ತಾವು ಹೀಗೊಂದು ಬದಲಾವಣೆಮಾಡಿ, ಇಲ್ಲದ ಭಾರವನ್ನು ಈ ಎಲ್ಲ ಹೈಸ್ಕೂಲುಗಳ ಮೇಲೂ ಹೇರುತ್ತೇವೆಂದು ಹೇಳುವುದು ಸೂಕ್ತವೂ ಅಲ್ಲ-ನ್ಯಾಯವೂ ಅಲ್ಲ.

ಇನ್ನು ಹೈಸ್ಕೂಲಿನಲ್ಲಿ ವ್ಯಾಸಂಗಮಾಡತಕ್ಕ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣ ಬೇರೆ ಕೊಡುತ್ತೇವೆಂದು ಹೇಳಿದ್ದೀರಿ. ಇಂಗ್ಲೆಂಡ್ ಅಮೆರಿಕಾ ದೇಶಗಳಲ್ಲಿ ಕೂಡ ಅಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿ 8 ವರ್ಷಗಳಿರುತ್ತದೆ. ಎಂದರೆ (8+4) 12 ವರ್ಷಗಳತನಕ ಸೆಕೆಂಡರಿ ಎಜುಕೇಷನ್ನಿನ ಅವಧಿ ಇರುತ್ತದೆ. ಆದನ್ನೇ ತಾವಿಲ್ಲಿ 10 ವರ್ಷಕ್ಕೆ ಇಳಿಸಿದ್ದೀರಿ. ತಾವು ಅಷ್ಟು ಬುದ್ಧಿವಂತರಿರಬಹುದು; ಅಷ್ಟು ಬೇಗ ಕಲಸಿಕೊಡುತ್ತೀರಿ. ಶಿಸ್ತು, ಸಂಯಮಗಳಿಗೆ ಹೆನರುವಾಸಿಯಾಗಿರತಕ್ಕ ಆ ಪಾಶ್ಚಿಮಾತ್ಯ ರಾಷ್ಟ್ರಗಳೇ ಅಲ್ಲಿ 12 ವರ್ಷದ ಅವಧಿಯನ್ನು ಇಟ್ಟುಕೊಂಡಿರುವಾಗ ನಾವಿಲ್ಲಿ ಆದೇ ವಿದ್ಯೆಯನ್ನು 10 ವರ್ಷಗಳಲ್ಲಿ ಕಲಸುತ್ತೇವೆಂದರೆ ನಾನು ಖಂಡಿತವಾಗಿಯೂ ಒಪ್ಪುವುದಿಲ್ಲ.

ಶಿಸ್ತು, ಸಂಯಮ ಎಲ್ಲವನ್ನೂ ನಮ್ಮ ಉಪಾಧ್ಯಾಯರುಗಳು ಕಲಸುತ್ತಿದ್ದಾರೆ, ನಿಜ. ಆದ್ದರಿಂದ 12

ವರ್ಷ ಕಲಸುವುದನ್ನು 10 ವರ್ಷದಲ್ಲೇ ಕಲಸುತ್ತೇವೆಂದು ಹೇಳುವುದನ್ನು ನಾವು ಒಂದು ವೇಳೆ ಒಪ್ಪುವುದಾದರೂ ಅದು ಸಾಧ್ಯವಿಲ್ಲದ ಮಾತು. ಬೇಕಾದರೆ ಮನಶ್ಶಾಸ್ತ್ರಜ್ಞರನ್ನು ಕರೆದು ಕೇಳುವುದಾದರೆ, ವಿದ್ಯಾರ್ಥಿಗಳಿಗೆ most receptive age ಅಂದರೆ ವಿಷಯ ಸಂಗ್ರಹಣ ಕಾಲ ಯಾವುದೆಂದರೆ, ಆರು ವರ್ಷದಿಂದ 10 ವರ್ಷ ಎಂದು ಹೇಳುತ್ತಾರೆ. ಹಾಗಿರುವಾಗ ಇವೊತ್ತು ನೀವು ಏನುಮಾಡಬೇಕೆಂದು ಸೂಚನೆಮಾಡುತ್ತಿದ್ದೀರಿ! ಈ ಕಾಲದಲ್ಲಿ ತಂದೆಯ ಜೊತೆಗೆ ವೃತ್ತಿಮಾಡುವುದಕ್ಕೆ ಸಹಾಯಮಾಡಲ ಎಂದು ಹೇಳುತ್ತಿದ್ದೀರಿ. ಇದರಿಂದಾಗಿ ಈಗ ಹಿಂದುಳಿದಿರುವವರು, ಹಿಂದುಳಿದ ಪಂಗಡದವರೆಂದೆನಿಸಿಕೊಂಡಿರುವವರು ಹಿಂದುಳಿದವರಾಗಿಯೇ ಇರುವುದಕ್ಕೆ ದಾರಿ ಮಾಡಿದ್ದೀರಿ. ಹೀಗಾಗಿ ಅವರನ್ನು ಮುಂದೆ ಇತರ ಸಿಟಿಯಲ್ಲಿರುವವರೊಡನೆ ಸೇರಹೊರಟರೆ ಅವರು ಒಂದು disadvantageous position ನಲ್ಲಿರುವಂತೆ ಮಾಡುತ್ತೀರಿ. ಟೌನಿನಲ್ಲಿರುವವರು ಹೆಚ್ಚಿನ ಅನುಕೂಲತೆಗಳನ್ನು ಪಡೆದು ಮುಂದೆ ಹೋಗುವರಲ್ಲದೆ ಹಳ್ಳಿಯವರಾಗೆ ತೊಂದರೆಯಾಗುವುದಕ್ಕೆ ಅವಕಾಶವಾಗುತ್ತದೆಂದು ವಿಧಿಯಿಲ್ಲದೆ ಹೇಳಬೇಕಾಗುತ್ತದೆ ಮಿಡ್ಲ್ ಸ್ಕೂಲಿನಲ್ಲಿ ಇದೇ ಒಂದು ವಿಧದಲ್ಲಿ ಬದಲಾವಣೆಮಾಡುತ್ತೇವೆಂದು ಪ್ರಾರಂಭಮಾಡಿ ಅದನ್ನು ಎದುರಿಸುವುದಕ್ಕೆ ಸತ್ಯಾಗ್ರಹಗಳು ಪ್ರಾರಂಭವಾಗಿ ಈ ಸತ್ಯಾಗ್ರಹದಲ್ಲಿ ಇಂದು ಒಂಬತ್ತು ಜನರು ಗುಂಡಿನೇಟಿಗೆ ತುತ್ತಾಗಿದ್ದಾರೆ. ಈ ರೀತಿಯಾಗಿ ಪರಿಣಾಮವನ್ನು ಯೋಚನೆಮಾಡದೆ ಎಲ್ಲೋ ಪ್ರಾರಂಭಮಾಡಿದರೆಂದು ಇಲ್ಲಿಯೂ ಪ್ರಾರಂಭಮಾಡಿದರೆ ಅದರಿಂದ ದೇಶಕ್ಕೆ, ರಾಷ್ಟ್ರಕ್ಕೆ ಅನಾಹುತವಾಗುತ್ತದೆಂದು ಅನೇಕರು ಭಾವಿಸಿದ್ದಾರೆ. ಆದ್ದರಿಂದ ನಾವು ಸುಮ್ಮನೆ ಕೂಲಂಕಷವಾಗಿ ಯೋಚಿಸಮಾಡದೆ, ಪರಿಶೀಲನೆಮಾಡದೆ ಮುನ್ನುಗ್ಗುವುದು ಬಹಳ ಕಷ್ಟ. ಅದರಲ್ಲೂ ಕೇಂದ್ರ ಸರ್ಕಾರದವರು ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣೆಯನ್ನು ಅವಶ್ಯಕ್ಕೆ ಜಾಗೆ ತರಕೂಡದೆಂದು ಹೇಳಿರುವಾಗ, 'ಹೊಚ್ಚೆಯನ್ನು ಹಾಗೆಯೇ ಕಟ್ಟಿಡಿ ಕಾಲನ್ನು ಮಾತ್ರ ಬೆಳೆಸೋಣ' ಎಂದು ಹೇಳಿದಹಾಗಾಗುತ್ತದೆ. ಯೂನಿವರ್ಸಿಟಿ ವಿದ್ಯಾಭ್ಯಾಸ ಮತ್ತು ಪ್ರೈಮರಿ ವಿದ್ಯಾಭ್ಯಾಸ ಸುಧಾರಣೆಯಾಗಬೇಕೆಂದರೆ, ಮಧ್ಯವರ್ತಿ ವಿದ್ಯಾಭ್ಯಾಸ ಕ್ರಮವನ್ನು ಕ್ರಮಗೊಳಿಸದೆ ಏನೂ ಪ್ರಯೋಜನವಾಗುವುದಿಲ್ಲ.

ಆಮೇಲೆ ಇಲ್ಲಿ ಹೇಳಿರುವ ಇನ್ನೊಂದು ಅಂಶವನ್ನು ತೆಗೆದುಕೊಳ್ಳಿ. ಇಂಟರ್‌ಮೀಡಿಯೆಟ್ ಕಾಲೇಜುಗಳ ವಿಚಾರ ಇಲ್ಲಿ ಹೇಳಿದ್ದಾರೆ. ಈಗಿರುವತಕ್ಕ ಇಂಟರ್‌ಮೀಡಿಯೆಟ್ ಕಾಲೇಜ್‌ಗಳೇನು? ಮುಂದೆ ಯೂನಿವರ್ಸಿಟಿಗೆ ಹೋಗುವಾಗ, ವಿಶ್ವವಿದ್ಯಾನಿಲಯಕ್ಕೆ ಕಾಲಿಡುವಾಗ ಏನು ಪದ್ಧತಿ, ಏನು ಕ್ರಮ ಅವನು ಅನುಸರಿಸಬೇಕಾಗುತ್ತದೆ. ಅದರ ವಿಷಯದಲ್ಲಿ ತಿಳಿವಳಿಕೆ ಕೊಡತಕ್ಕ ಸ್ಥಳ ಇದು. ಈ ದೃಷ್ಟಿಯಿಂದ ಅಲ್ಲಿನ ವಿದ್ಯಾಭ್ಯಾಸದಲ್ಲಿ ಯಾವ ಕರಿಕ್ಯುಲಂ ಇರಬೇಕೆಂಬುದನ್ನು ಆಲೋಚನೆ ಮಾಡಿ ಅದರಂತೆ ಪ್ರೊಫೆಸರುಗಳು ಬಂದು ಪಾಠಗಳನ್ನು ಕಲಸುತ್ತಿದ್ದಾರೆ. ಮೇಲಾಗಿ ಈ ಇಂಟರ್‌ಮೀಡಿಯೆಟ್ ಸ್ಟೇಜಿನಲ್ಲಿಯೇ ಹುಡುಗರ ವಾತಾವರಣ ಬದಲಾಗುವುದು. ಹುಡುಗನಿಗೆ ತಾನು ಹೈಸ್ಕೂಲನ್ನು ಮುಗಿಸಿದೆನೆ, ಇನ್ನು ಮುಂದೆ ಪ್ರೊಫೆಸರ್ ಮುಂದೆ ವಿದ್ಯಾಭ್ಯಾಸ ಮಾಡುತ್ತೇನೆಂಬ ಭಾವನೆ, ಒಂದು ಹೊಸ ವಾತಾವರಣ ಅವನ ಮುಂದೆ ಇರುತ್ತದೆ. ಅಂಥದನ್ನು ಅಲ್ಲಿಂದ ತೆಗೆದು ಹೈಸ್ಕೂಲ್‌ನಲ್ಲಿ ಸೇರಿಸುತ್ತೇವೆಂದು ಹೇಳಿದರೆ ಏನು ಪ್ರಯೋಜನವಾಗುತ್ತದೆ? ಇಲ್ಲೇನು ಮಾಡುತ್ತಾರೆ? ಬೋರ್ಡ್ ಆಫ್ ಸೂಪರ್‌ವೈಸರ್ಸ್ ಎಂದು ಬೇರ್ಪಡಿಸುತ್ತೇವೆ, ಅವರು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಕೈಕೆಳಗಿರುತ್ತಾರೆಂದು ಹೇಳಿದ್ದಾರೆ. ಬೋರ್ಡ್ ಆಫ್ ಡೈರೆಕ್ಟರ್ಸ್ ಎಂದರೆ ಅವರೇನು ಯೂನಿವರ್ಸಿಟಿಯಲ್ಲಿ ಇದ್ದವರೇ? ಅವರಿಗೆ ಎಂಥ ವಿದ್ಯಾಭ್ಯಾಸವಿರಬೇಕೆಂದು ಹೇಳಿದ್ದಾರೆ? ಅಥವಾ ಈಗ ಯೂನಿವರ್ಸಿಟಿಯಲ್ಲಿರುವವರನ್ನು ಇಲ್ಲಿಗೆ ಟ್ರಾನ್ಸ್‌ಫರ್ ಮಾಡಿದರೆ, ಅವರು ಪ್ರತಿದಿವಸವೂ ಪ್ರಯೋಗಶಾಲೆಯಲ್ಲಿದ್ದು ಉಪನ್ಯಾಸಮಾಡಿ, ಉಪದೇಶ ಮಾಡಿ ಎಂದು ಹೇಳುತ್ತಿದ್ದರೆ ಅವರ ಮುಂದಿನ ಭವಿಷ್ಯವೇನು? ಅವರು ಬೋರ್ಡಿನವರಾಗಿ ಏನುತಾನೆ ಹೇಳಿ ಕೊಡುವುದಕ್ಕೆ ಸಾಧ್ಯವಾಗುತ್ತದೆ?

ಅಲ್ಲದೆ ವಿದ್ಯಾರ್ಥಿಯು ವನಸ್ಪಿನಮೇಲೆ ತಾನು ಇಂಟರ್ಮೀಡಿಯೆಟ್ ಕಾಲೇಜಿಗೆ ಹೋದೆನೆಂಬ ಮನೋಭಾವನೆ, ತನ್ನ ಭವಿಷ್ಯ ಒಂದು ಹೊಸ ರೀತಿಯಲ್ಲಿ ರೂಪುಗೊಳ್ಳುತ್ತಿದೆಯೆಂಬ ಉತ್ಸಾಹ ಅವನಲ್ಲಿ ಉಂಟಾಗುತ್ತಿದ್ದುದು ಹೋಗಿ, ಇನ್ನೂ ತಾನು ಹೈಸ್ಕೂಲನಲ್ಲೇ ಇದ್ದೇನೆ ಎಂಬ ಭಾವನೆ ಇರುತ್ತದೆ. ಈ ದೃಷ್ಟಿಯಿಂದಲೇ ಹಿಂದೆಯೂ ಎಫ್. ಏ. ಮತ್ತು ಎಂಟ್ರನ್ಸ್ ಎಂದು ಇಟ್ಟಿದ್ದರು. ಈಗಲೂ ಮೆಡಿಕಲ್ ಕೋರ್ಸಿಗಾಗಲಿ ಇಂಜಿನಿಯರಿಂಗ್ ಕೋರ್ಸಿಗಾಗಲಿ ಯಾವ ಡಿಗ್ರಿ ಕೋರ್ಸಿಗೆ ಹೋಗಬೇಕಾದರೂ ಪ್ರಿ-ಮೆಡಿಕಲ್, ಪ್ರಿ-ಎಲ್.ಎಂ.ಪಿ.. ಪ್ರಿ-ಎಂಜಿನಿಯರಿಂಗ್ ಎಂದು ಒಂದು ಪ್ರಿಪರಿಯಸ್ ಪರೀಕ್ಷೆಯೆಂಬುದಿಲ್ಲವೇಕೆ? ಇವುಗಳೆಲ್ಲಾ ಹೈಸ್ಕೂಲಿನಿಂದ ಬಂದ ಹುಡುಗನ ಮನಸ್ಸಿನ ಮೇಲೆ ಕಾಲೇಜಿಗೆ ಹೋಗುವುದಕ್ಕೆ ಮೊದಲು ಒಂದು ಪರಿಣಾಮವನ್ನುಂಟುಮಾಡಿ ಮುಂದೆ ವಿಶ್ವವಿದ್ಯಾನಿಲಯದಲ್ಲಿ ಕ್ರಮ ಯಾವರೀತಿಯಿರುತ್ತದೆಯೆಂಬುದನ್ನು ತೋರಿಸಿಕೊಡುವುದಕ್ಕೆ ಒಂದು ಪ್ರಯೋಗಶಾಲೆಯ ರೂಪದಲ್ಲಿರುತ್ತಿದ್ದುವು. ಅಂಥವನ್ನೀಗ ತೆಗೆದು ಹೈಸ್ಕೂಲಿಗೇ ಸೇರಿಸಿದರೆ ಏನು ದುಷ್ಪರಿಣಾಮವಾಗುತ್ತದೆಂಬುದನ್ನು ನೋಡಬೇಕು.

ಅಲ್ಲದೆ ಉಪಾಧ್ಯಾಯರುಗಳಿಗೆ ಏನು ಏರ್ಪಾಡು ಮಾಡಬೇಕು? ಇಂಟರ್ಮೀಡಿಯೆಟ್ ಕಾಲೇಜಿನ ಲೆಕ್ಚರರುಗಳು ಹೈಸ್ಕೂಲಿಗೆ ಬರಬೇಕು. ಅಲ್ಲಿಗೆ ಇಲ್ಲಿ ಮೇಸ್ಟ್ರಾಗಿ ಒಬ್ಬ ಸೇರಿದರೆ ಅಲ್ಲೇ ರಿಚ್ಚೈರ್ ಆಗಬೇಕು. ಅಲ್ಲಿಗೆ ಆತನ ಭವಿಷ್ಯವೇನು? ಆತನ education ಏನೆತ್ತೋ ಅದೆಲ್ಲವನ್ನೂ ಬಿಟ್ಟು ಇಲ್ಲೇ ಹೈಸ್ಕೂಲಿಗೆ ಸೇರಿಕೊಳ್ಳಬೇಕಾಗುತ್ತದೆ.

ಆಮೇಲೆ ಇಂಗ್ಲೀಷಿನ ವಿದ್ಯಾಭ್ಯಾಸ. ಡಾ॥ ರಾಧಾಕೃಷ್ಣರವರು 'ನಮ್ಮ ದೇಶದಲ್ಲಿ ಎಲ್ಲಿಯವರೆಗೆ ಯೂನಿವರ್ಸಿಟಿಯಲ್ಲಿ ಇಂಗ್ಲೀಷ್ ಭಾಷೆಯೇ ಇರುತ್ತದೆಯೋ ಅಲ್ಲಿಯವರೆಗೂ ಕೆಳಗಿನ ತರಗತಿಗಳಲ್ಲೂ ಈಗಿನಂತೆಯೆ ಇಂಗ್ಲೀಷ್ ಇರಬೇಕು' ಎಂದು ಹೇಳಿದುದರ ಮೇಲೆ ಕೊನೆಯ್ಲು ನಿಮಿಷದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಿರುವುದಾಗಿ ಹೇಳಿದ್ದಾರೆ. ಹೀಗಿರುವಾಗ ಮುಂದೆ ಕಾಲೇಜಿನಲ್ಲಿ ಆ ಇಂಗ್ಲೀಷಿನಲ್ಲಿ ಆಗುವ ಭಾಷಣಗಳನ್ನು ತಿಳಿದುಕೊಳ್ಳುವುದಕ್ಕೆ ಹುಡುಗರಿಗೆ ಶಕ್ತಿಯಿರಬೇಕೇ ಬೇಡವೆ? ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ, ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸದಲ್ಲಿ ಎಷ್ಟು ವಿದ್ಯಾಭ್ಯಾಸವನ್ನು ಇಂಗ್ಲೀಷಿನಲ್ಲಿ ಈಗ ಕೊಡುತ್ತಿದ್ದೇವೋ ಅಷ್ಟನ್ನೂ ಇಲ್ಲಿ ಹೇಳಿರುವಂತೆ ಎರಡೇ ವರ್ಷದಲ್ಲಿ ಕೊಡುವುದಕ್ಕೆ ಸಾಧ್ಯವೇ!! ಒಂದುವೇಳೆ ಹೇಳಿಕೊಟ್ಟರೂ, ವ್ಯಾಕರಣವನ್ನೇ ಆಗಲಿ, Composition

(ಶ್ರೀ ಎ. ಭೀಮಪ್ಪನಾಯಕ್.)

ನ್ನನ್ನೇ ಆಗಲಿ, ಆ ಹುದ್ದೆಗ ಅರ್ಥ ಮಾಡಿಕೊಳ್ಳುವುದಕ್ಕೆ ತಾನೇ ಹೇಗೆ ಸಾಧ್ಯ ?

ಒಬ್ಬ ಸದಸ್ಯರು.—ಅದಕ್ಕೆ ನಿಮ್ಮ ಅಭಿಪ್ರಾಯ ವೇನು ?

ಶ್ರೀ ಎ. ಭೀಮಪ್ಪನಾಯಕ್.—ನನ್ನ ಅಭಿಪ್ರಾಯದಲ್ಲಿ, ಸಧ್ಯಕ್ಕೆ ಈಗಿನಂತೆ ಇಂಗ್ಲೀಷ್ ಇರಲೇಬೇಕು. ಇಂದು ನಮ್ಮ ದೃಷ್ಟಿ ಇಡೀ ಜಗತ್ತಿನಕಡೆಗಿದೆ. ಭಾರತ ಒಂದೇ ನಮ್ಮ ದೃಷ್ಟಿಯಲ್ಲಲ್ಲ, ಹಿಂದೀ ನಮ್ಮ ರಾಷ್ಟ್ರ ಭಾಷೆ; ಇಂಗ್ಲೀಷು ಅಂತರರಾಷ್ಟ್ರೀಯ ಭಾಷೆ; ಕನ್ನಡ ನಮ್ಮ ಮಾತೃಭಾಷೆ-ಇವು ಮೂರನ್ನೂ ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ತಿಳಿದುಕೊಳ್ಳುವುದೆಂದರೆ ಕರತಲರಾಮಲಕವಾಗಿ ತಿಳಿದುಕೊಳ್ಳಬೇಕು. ಅದು ಬಿಟ್ಟು ಒಂದನೆಯ ಕ್ಲಾಸಿನಲ್ಲಿ cat, rat, hat, mat ಎಂದು ಕಲತುಕೊಳ್ಳುವುದು ; ಎರಡನೆಯ ಕ್ಲಾಸಿನಲ್ಲಿ 'Cat is an animal, it has two eyes' ಎಂದು ಇಷ್ಟನ್ನು ಮಾತ್ರ ಕಲಸುವುದು, ಇವುಗಳಿಂದ ಏನು ಪ್ರಯೋಜನ ! ಮುಂದೆ ಹೈಸ್ಕೂಲಿಗೆ ಹೋದರೆ ಆತನಿಗೇನು ಹೇಳಿಕೊಡುವುದು ! ಅಲ್ಲ ಬೇರೆ ನಾನಾ ವೃತ್ತಿಗಳು ನಾನಾ ಸ್ಪೆನ್ಸ್ ಶಿಕ್ಷಣಗಳು ಎಂದು ಹೇಳಿದರೆ, ಇದುವರೆಗೂ ಆತನಿಗೆ ಅಲ್ಪಸ್ವಲ್ಪ ಸಿಕ್ಕಾತ್ತಿದ್ದ ವಿಜ್ಞಾನ ಶಾಸ್ತ್ರವೂ ಇಲ್ಲದ ಹಾಗಾಗುತ್ತದೆ. ಯಾವುದೂ ನರಿಯಾಗಿ ಬಾರದಹಾಗಾಗುತ್ತದೆ. ಒಂದು ವೇಳೆ ಸ್ವಲ್ಪಮಟ್ಟಿಗೆ ಪಾಠಗಳು overlap ಆಗುತ್ತಿದ್ದರೂ ನಷ್ಟವಿರಲಲ್ಲ. ಕಂಠಪಾಠಮಾಡಿದ ಹಾಗಾಗುತ್ತಿತ್ತು. ಚಿಕ್ಕವಯಸ್ಸಿನಲ್ಲಿ – Receptive age ನಲ್ಲಿ ಒಳ್ಳೊಳ್ಳೆಯ ವಿಷಯಗಳನ್ನು ಹೇಳಿಕೊಟ್ಟು ಕಂಠಪಾಠ ಮಾಡಿಸುತ್ತಿದ್ದರು. ಈಗ ಏನು ಮಾಡುತ್ತಾನೆ ! ತಂದೆಯು ಜೊತೆಗೆ ಆತ ಒಂದು ಎಮ್ಮೆಯನ್ನು ಹಿಡಿದುಕೊಂಡು ಮೇಯಿಸುತ್ತಿದ್ದರೆ ಈತನೂ ಒಂದು ಎಮ್ಮೆಯನ್ನು ಹಿಡಿದುಕೊಂಡು ಮೇಯಿಸಲು ಹೋಗುತ್ತಾನೆ, ಅಷ್ಟೆ. ಹೀಗೆ ಮಾಡಿ ಆ ಎಳೆ ವಯಸ್ಸಿನ ಮಗುವಿನ ಮೆದುಳಿನ ಶಕ್ತಿಯನ್ನು ಏಕೆ ವ್ಯರ್ಥಾ ಕಳೆಯುತ್ತೀರಿ ? ಇದನ್ನು ತಾವು ಕೂಲಂಕಷವಾಗಿ ಯೋಚನೆ ಮಾಡಿ.

(The Minister for Law and Education was not found in his seat.)

Mr. SPEAKER.—It seems to me that it is the desire of several members of this House that the concerned Minister should be present when a debate on this important motion is going on. I sent word to the concerned Minister. He has not come back. Unless he is here, I do not think the House is in a mood to go on with further discussion. I therefore adjourn the House till 3-30. The House will rise for lunch and meet at 3-30.

The House rose for Lunch at Twenty-five Minutes past Two of the Clock and reassembled at Thirty Minutes past Three of the Clock.

[Mr. SPEAKER in the Chair.]

Sri H. SIDDAVEERAPPA (Minister for Home and Industries).—Sir, I beg to bring to your kind notice that my colleague the Minister for Law and Education is busy in the other House because he is in charge of an important motion. He will be coming here within about 15 minutes or half an hour at the most. In the meanwhile, with your kind permission I will follow the discussion, I will note down the points.

Mr. SPEAKER.—If the House has no objection.

Sri J. MOHAMED IMAM (Jagalur).—We are going to take the suggestion of the Revenue Minister. Till the Minister for Education comes, we may take some other work and he suggested that we may continue discussion on the Village Offices Bill.

Mr. SPEAKER.—If the House gives consent to take up the Village Offices Bill, we can take it up.

(Several Members: Yes.)

Yes. That can be done in the meanwhile.

MYSORE VILLAGE OFFICES (AMENDMENT) BILL, 1953.

Motion to consider—(continued).

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ಪೀಕರ್, ಈಗಾಗಲೇ ಮೈನೂರು ಸಂಸ್ಥಾನದ ಗ್ರಾಮನಿವರಿಗೆ ಸಂಬಂಧಪಟ್ಟ ತಿದ್ದುಪಡಿ ಮಸೂದೆ ನಮ್ಮ ಮುಂದೆ ಬಂದು ಚರ್ಚೆಯಾಗಿದೆ. ಇದರಲ್ಲಿ 9 (a) ನಿಬಂಧನೆಯಿಂದ ಶ್ಯಾನುಭೋಗರು ಮತ್ತು ಪಟೇಲರುಗಳಿಗೆ ಅಜನ್ಮಸಿದ್ಧವಾದ ಯಾವ ಹಕ್ಕುದೆಯೋ ಆ ಹಕ್ಕಿಗೆ ಧಕ್ಕೆ ಬರಬಹುದೆಂಬ ನಿಜಾಂಶ ಎದ್ದು ಕಾಣುತ್ತದೆ. ಪಟೇಲರು ಯಾರು, ಸರ್ಕಾರಕ್ಕೂ ಅವರಿಗೂ ನಂಬಂಧವೇನಿದೆ ಎಂಬುದನ್ನು ತಿಳಿಯದೆ ಮಾಡಿರುವ ಈ ಮಸೂದೆ ಸರ್ಕಾರದ ಉಳಿವಿಗೇ ಕಷ್ಟಬಂದು ಸರ್ಕಾರದ ಪರಿಸ್ಥಿತಿ ಹದಗೆಡಬಹುದೆಂಬ ಶಂಕೆ ತರುತ್ತದೆ. ಏಕೆಂದರೆ ಯಾವ ಕಾನೂನನ್ನು ಜಾರಿಗೆ ತರಬೇಕಾದರಾಗಲಿ ಅಥವಾ ಯಾವ ಹಣ ಕಾಸಿನ ವಸೂಲಿಯೇ ಆಗಬೇಕಾಗಲಿ ಗ್ರಾಮಾಂತರ ಗಳಲ್ಲಿ ಇವರುಗಳ ನೆರವು ಅಗತ್ಯ. ಇದು ಸತ್ಯಾಂಶ. ಇದನ್ನು ಬ್ರಿಟಿಷ್ ಸರ್ಕಾರದವರು ಚೆನ್ನಾಗಿ ಮನಗಂಡಿದ್ದರು. ಆದ್ದರಿಂದಲೆ ಅವರು ಪ್ರತಿಯೊಂದು ಹಳ್ಳಿಯಲ್ಲೂ ಗಣ್ಯ ಮಹನೀಯರು ಯಾರಿದ್ದಾರೋ ಅಂಥವರಿಗೆ ಮಾತ್ರ ಪಟೇಲ್ ಶ್ಯಾನುಭೋಗಿಕೆಗಳನ್ನು ಕೊಟ್ಟರು. ಅವರು